# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ತಾಮ್ರಧ್ವಜನ ಕಾಳಗ

# (ಪಾಂಡವಾಶ್ವಮೇಧ)


ಕವಿ

## ಅಜ್ಞಾತ ಕವಿ



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com



## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



ಪ್ರೊ. ಎಂ. ಎ. ಹೆಗಡೆ
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



ಎಸ್. ಎಚ್. ಶಿವರುದ್ರಪ್ಪ
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಜೈಮಿನಿ ಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ - ೧೯೫೨

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೮೮

**ಪಾತ್ರಗಳು:**

ಅಶ್ವ, ಮಯೂರಧ್ವಜ, ತಾಮ್ರಧ್ವಜ, ನಾರದ, ಕೃಷ್ಣ, ಅರ್ಜುನ, ಬ್ರಾಹ್ಮಣ, ಮಯೂರಧ್ವಜನ ಪತ್ನಿ, ಶ್ರೀಹರಿ

**ಕಥಾಸಾರಾಂಶ:**

ಪಾಂಡವರ ಅಶ್ವಮೇಧದ ತುರಗ ರತ್ನಾಖ್ಯಪುರಕ್ಕೆ ಬರುತ್ತದೆ. ಅಲ್ಲಿಗರಸ ಮಯೂರಧ್ವಜ. ಆತನ ಮಗ ತಾಮ್ರಧ್ವಜ. ಶ್ರೀಹರಿಯ ದರ್ಶನಕ್ಕಾಗಿ ಹಂಬಲಿಸಿದ ಮಯೂರಧ್ವಜ, ನಾರದರ ಮಾತಿನಂತೆ ತಾನೂ ಅಶ್ವಮೇಧದೀಕ್ಷಿತನಾಗುವನು. ತುರಗದ ಬೆಂಗಾವಲಿಗೆ ತಾಮ್ರಧ್ವಜ ಹೊರಡುವನು.

ಇತ್ತ ಪಾಂಡವರ ಅಶ್ವವೂ, ಇವರ ಅಶ್ವವೂ ಎದುರಾಗಿ, ತಾಮ್ರಧ್ವಜ ಅದನ್ನು ಬಂಧಿಸುವನು. ನಂತರ ಅವರಲ್ಲಿ ಕಾಳಗವೇರ್ಪಟ್ಟು ತಾಮ್ರಧ್ವಜನು ಕೃಷ್ಣಾರ್ಜುನರನ್ನೂ ಅವರ ಸೇನೆಯನ್ನೂ ಗೆಲ್ಲುವನು. ಉಪಾಯದಿಂದ ಬ್ರಾಹ್ಮಣ ವೇಷದಿಂದ ಮಯೂರಧ್ವಜನ ಅರಮನೆ ಸೇರಿದ ಕೃಷ್ಣಾರ್ಜುನರು ಅವನ ಅರ್ಧದೇಹವನ್ನು ಸತಿಸುತರು ಕತ್ತರಿಸಿ ಕೊಡಬೇಕೆಂದು ಕೇಳುವರು. ಅದರಂತೆಯೇ ಅರಸನು ಭಕ್ತಿಯಿಂದ ಕೃಷ್ಣಾರ್ಪಣಬುದ್ಧಿಯಿಂದ ಕೊಡಲು ಸಿದ್ಧನಾದಾಗ, ಹರಿ ಮೈದೋರಿ ಅರಸನನ್ನು ಅನುಗ್ರಹಿಸುವ ಭಕ್ತಿಪ್ರಧಾನ ಕಥಾನಕ.

**ಕವಿ ಪರಿಚಯ :**

ಕವಿ ತಿಳಿದಿಲ್ಲ: ಶಿಕಾಖ್ಯಪುರೀಶಭಕ್ತ, ಆದಿ ಕುತ್ಯಾರಸೋಮೇಶಭಕ್ತ ಎಂಬ ಸೂಚನೆ ಇದೆ.

**ಟಿಪ್ಪಣಿ:**

ತೆಂಕಿನಲ್ಲಿ ಪ್ರಚಲಿತದಲ್ಲಿರುವ ಪ್ರಸಂಗ. ಬಹಳ ಹಳೆಯ ಪ್ರಸಂಗವಾಗಿದ್ದು, ಛಂದೋಬಂಧಗಳೂ ಕೂಡ ವಿಭಿನ್ನವಾಗಿವೆ. ಹೆಚ್ಚಿನ ಪದ್ಯಗಳ ಪೂರ್ವಾರ್ಧವು ಒಂದು ಮಟ್ಟನ್ನು ಹೋಲುತ್ತಿದ್ದರೆ ಉತ್ತರಾರ್ಧದ ರಚನೆಯು ಇನ್ನೊಂದು ಮಟ್ಟಿನ ಲಕ್ಷಣವನ್ನು ಹೊಂದಿದೆ.

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀಮದ್ವ್ಯಾಸಮುನೀಂದ್ರಪೂಜಿತಪದಂ ಸಾನಂದಲೀಲಾರ್ಣವಂ |
ಶ್ಯಾಮಂ ಶಾಂತಗುಣಾಲಯಂ ಸಿರಿವರಂ ಸೋಮಾರ್ಕತೇಜೋನ್ವಿತಮ್ |
ಕಾಮಾನಂತಕಲಾನಿಧಿಂ ಸುಲಲಿತಂ ಕೌಮೋದಕೀ ಕೌಸ್ತುಭಂ |
ಹೇಮಾಕ್ಷಾಸುರಮರ್ದನಂ ನರಹರಿಂ ಧ್ಯಾಯಾಮಿ ಚಿತ್ತೇ ಸದಾ || 1 || 1 ||

**ನಾಟಿ - ಝಂಪೆ**
ತ್ರಿಪುರಹರನ ಸುಪುತ್ರ | ತ್ರಿದಶೌಘನುತಿಪಾತ್ರ |
ಕೃಪವನಧಿ ಶುಭಗಾತ್ರ | ಕಮಲದಳನೇತ್ರ ||
ಜಯ ಜಯತು ಜಯತು || ಪ ||
ಫಣಿಗಣೋಪಮ ಭರಣ | ಪರಮಪಾವನ ಚರಣ |
ಫಣಿಶಯನ ಸುಪ್ರೀತ | ಪಾಪೌಘಘಾತ ||
ಮಣಿಖಚಿತ ಸುಕಿರೀಟ | ವಿಮಲಗಂಗಾಜೂಟ |
ಮಣಿಮಂತದಿತಿಜಾರಿ | ಮೂಷಕಸವಾರಿ || ಜಯ || 1 ||

ಕರುಣನಿಧಿ ಹೇರಂಬ | ಕನಕಾದ್ರಿ ಪ್ರತಿಬಿಂಬ |
ಕರಧೃತಾಂಕುಶಪಾಶ | ಕಿರುನಗೆಯುಲ್ಲಾಸ ||
ಪರಿಪೂರ್ಣ ವಿಶ್ವಮಯ | ಪೌರಾಣಶ್ರುತಿಪ್ರೀಯ |
ಶರಜನ್ಮಗುಹಸಹಜ | ಸೂರ್ಯ ಮಿತತೇಜ || ಜಯ || 2 ||

ಮತ್ತಗಜನಿಭವದನ | ಮೌನಿಜನಹೃತ್ಸದನ |
ನಿತ್ಯಮಂಗಲರೂಪ | ನಿಜ ಸುಪ್ರತಾಪ ||
ಚಿತ್ರಜಾಸ್ತ್ರ ವಿದೂರ | ಛಲದಂಕಮಲಶೂರ |
ಕುತ್ಯಾರಪುರವಾಸ | ಕರುಣಿ ವಿಘ್ನೇಶ || ಜಯ || 3 || 4 ||

**ವಾರ್ಧಕ**
ಸ್ಮರಹರ ಕಪಾಲಾಕ್ಷನಂ ದಕ್ಷಶಿಕ್ಷನಂ |
ಸುರವರಾರ್ಚಿತಚರಣನಂ ಭುಜಗಭರಣನಂ |
ಕರಿಚರ್ಮಧರ ರುದ್ರನಂ ವೀರಭದ್ರನಂ ಈಶನಂ ಜಗದೀಶನಂ ||
ಪರಮಪುಣ್ಯಶರೀರನಂ ಗುಣಗಭೀರನಂ |
ಕರಕಪಾಲ ತ್ರಿಶೂಲನಂ ರುಂಡಮಾಲನಂ |
ಮೆರೆವ ಕುತ್ಯಾರಧಿಪನಂ ಸೋಮನಾಥನಂ ಸ್ಮರಿಸಿ ಮತಿಯಂ ಪಡೆವೆನು || 1 || 5 ||

**ಭಾಮಿನಿ**
ಕೀಶಕುಲಕಮಲಾರ್ಕ ತ್ರೈಜಗ |
ದೀಶ ದಶಮುಖದರ್ಪಹರ ಹೃಷಿ |
ಕೇಶನಂಘ್ರಿಸರೋಜಯುಗಳಾ ಭೃಂಗ ಕುಲಿಶಾಂಗ ||
ದೋಷದುರಿತಕುಠಾರ ಕುರುಕುಲ |
ನಾಶ ಕವಿಜನಪೋಷ ಪಾವನ |
ವೇಷ ಮುಖ್ಯಪ್ರಾಣ ಸಲಹುಗೆ ಹನುಮನನುದಿನವು || 1 || 6 ||

**ಕಂದ**
ಸಿರಿಶಾರದೆಯಂ ಸ್ಮರಿಸುತ |
ಗಿರಿಜೆಯ ಕೊಂಡಾಡುತ ಸುರಪಾದ್ಯಮರರಿಗಂ ||
ನಿರತಾನಂದದಿ ಮುನಿವ್ರಜ |
ಕೆರಗುತ ಗುರುಹಿರಿಯರ ಪ್ರಾರ್ಥಿಸಿ ಮನ್ನಿನದಿಂ || 1 || 7 ||

**ದ್ವಿಪದಿ**
ವ್ಯಾಸ ಶುಕ ವಾಲ್ಮೀಕಿ ಮುಖ್ಯರಿಗೆ ಮಣಿದು |
ತೋಷದಿಂ ಧರೆಯ ಕವಿಜನಕೆ ಕೈಮುಗಿದು || 1 ||

ಭಾರತದಿ ಮೆರೆವಶ್ವಮೇಧ ಪರ್ವದಲಿ |
ಚಾರು ಜೈಮಿನಿಮುನಿಪ ಪೇಳ್ದ ಕಥನದಲಿ || 2 ||

ಧರಣಿಪತಿ ಯಮಜ ಮಖವೆಸಗೆ ಧಾತ್ರಿಯಲಿ |
ನರ ಮುರಾಂತಕರು ಹಯಗೊಂಡು ಭೂಪರಲಿ || 3 ||

ಚಾರು ಕಪ್ಪವ ಕೊಂಡು ಬರುತಿರಲು ಮುದದಿ |
ವೀರ ತಾಮ್ರಧ್ವಜನು ತಡೆದಾಗ ಪಥದಿ || 4 ||

ಕಟ್ಟಿ ಕುದುರೆಯ ಕಾದಿ ಕೃಷ್ಣಾರ್ಜುನರನು |
ಒಟ್ಟಯಿಸುತುಭಯಶ್ವ ತರೆ ಕಂಡು ಪಿತನು || 5 ||

ಚಿಂತೆಯಿಂದಿರಲು ಮರುದಿವಸ ಕರುಣದಲಿ |
ಕಂತುಪಿತ ನಿಜರೂಪದೋರೆ ಭಕ್ತಿಯಲಿ || 6 ||

ಧರೆಯಶ್ವ ಸೇನೆ ಸಹ ಬಿಡದೆ ಶ್ರೀಹರಿಯ |
ಚರಣಕೊಪ್ಪಿಸುತ ಶಿಖಿಕೇತು ಬೆಂಬಳಿಯ || 7 ||

ಆರ್ಕೈಕೆಯಲಿ ವೀರವರ್ಮನಲಿ ಬಂದು |
ಚಾರುಯುದ್ಧವ ಬಲಿದು ಗೆಲಿದ ಕಥೆಯಿಂದು || 8 ||

ಯಕ್ಷಗಾನದೊಳೊರೆವೆ ತಪ್ಪಿದರೆ ಜನರು |
ತಕ್ಷಣದಿ ತಿದ್ದಿ ಮೆರೆಸುವುದು ಬಲ್ಲವರು || 9 || 16 ||

**ಸೌರಾಷ್ಟ್ರ - ತ್ರಿವುಡೆ**
ಭೂಪ ಜನಮೇಜಯಗೆ ಮುನಿಕುಲ |
ದೀಪ ವೈಶಂಪಾಯ ಭಾರತ |
ತಾ ಪ್ರಿಯದಿ ಶ್ರುತಗೊಳಿಸಲಾ ಜ್ಞಾ | ನೋಪನಿಧಿಯು || 1 ||

ಕೇಳಿದನು ನೃಪ ಜೈಮಿನೀಶ್ವರ |
ಪೇಳಿರುವ ಕಥನದಲಿ ಕುಂತೀ |
ಬಾಲನೆಸಗಿದ ಹಯದ ಕ್ರತುವನು | ಲೀಲೆಯಿಂದ || 2 ||

ಬರಲು ತಾಮ್ರಧ್ವಜನು ಪಥದಲಿ |
ತುರಗ ತಡೆಯಲು ಬಿಡಿಸಿಕೊಂಡಾ |
ವರ ಪರಾಕ್ರಮಿ ವೀರವರ್ಮನ | ಧುರದಿ ಗೆಲಿದು || 3 ||

ಹರಿಶರಣರಾನಂದದಿಂದಲಿ |
ಧರೆಯ ಪಾಲಿಸುತಿರ್ದರೆಂಬೀ |
ವರಚರಿತ್ರವ ಸಾಂಗದಿಂದೆನ | ಗರುಹು ಮುದದಿ || 4 ||

ನೃಪವರನು ಕೈಮುಗಿಯಲೆತ್ತುತ |
ಕೃಪೆಯೊಳಾ ಮುನಿತಿಲಕ ವೇದಾ |
ಧಿಪನ ಸ್ಮರಿಸುತಲೆಂದ ಮುಂಗತೆ | ವಿಪುಳಮತಿಗೆ || 5 || 21 ||

**ಭಾಮಿನಿ**
ಗತಚರಣಸಾರಥಿಯಗೋಚರ |
ಪಥದೊಳೈತಹನಾತ್ಮಪುತ್ರನ |
ಸುತನ ಸೋದರನಿಂದ ಜನಿಸಿದ ಪ್ರತುಳಬಲನಿರುಳು ||
ಖತಿಯೊಳಳಿಸಿದ ಮಥಿಸಿದಾತನ |
ಸತಿಯುದರಸಂಭವನ ಪೌತ್ರಗೆ |
ಕ್ಷಿತಿಜೆಯರಸನ ಸ್ತುತಿಸಿ ಮುಂಗತೆ ಪ್ರತಿಪನುಸುರಿದನು || 1 || 22 ||

**ಭೈರವಿ - ಝಂಪೆ**
ಕೇಳು ಜನಮೇಜಯನೆ | ಪೇಳುವೆನು ನಿಮ್ಮವರ |
ಮೂಲಕಥನಗಳೀಗ | ಲೀಲೆಯಿಂದೊಲಿದು || 1 ||

ದಾಯಾದ್ಯಮತ್ಸರದಿ | ನ್ಯಾಯವೆಸಗುತಲಿ ಕುರು |
ರಾಯನನ್ವಯವಳಿಸಿ | ವಾಯುಜಾಗ್ರಜನು || 2 ||

ದೋಷಕಂಜುತ ಮರುಗೆ | ವ್ಯಾಸನಾಜ್ಞೆಯಲಿ ಯವ |
ನಾಶ್ವನಲ್ಲಿಂದ ಹಯ | ವಾ ಕ್ಷಣಕೆ ತರಿಸಿ || 3 ||

ತುರಗಾಧ್ವರವ ರಚಿಸಿ | ನರನು ಮಾರ್ಬಲಗೂಡಿ |
ಧರೆಯ ಕಪ್ಪವ ಕೊಂಡು | ವರನೀಲಧ್ವಜನ || 4 ||

ಗೆಲಿದು ಹಂಸಧ್ವಜನ | ಬಲಸಹಿತಲೊಡಗೊಂಡು |
ಒಲಿಸಿ ಪ್ರಮೀಳೆಯನು | ಖಳಭೀಷಣರನು || 5 ||

ಮುರಿದು ಮಣಿಪುರಕಯ್ದಿ | ಸುರನದಿಯ ಶಾಪದಲಿ |
ಧುರದಿ ಮೂರ್ಛಿತನಾಗೆ | ಹರಿಯು ಕರುಣದಲಿ || 6 ||

ಬಂದು ಎಬ್ಬಿಸಲಾಗ | ನಿಂದಾರು ದಿನವಲ್ಲಿ |
ಚಂದದಿಂ ಪುರಜನರ | ನಂದನಂದನನು || 7 || 29 ||

**ವಾರ್ಧಕ**
ಕೈಮುಗಿದ ಜನರಿಷ್ಟಮಂ ನೀಡುತಹಿಪನಂ |
ಮೈಮುಟ್ಟಿ ಸಂತೈಸಿ ಧನಕನಕಮಣಿಯಿತ್ತು |
ಶೈಮಿನಿಪುರೀಶನಾತ್ಮಜನೆಡೆಗೆ ವರಭೀಮಸೇನನಂ ಕಳುಹಿ ಬಳಿಕ ||
ಹೈಮಾಂಬರಂ ಸಕಲ ಬಲಸಹಿತ ಮೈದುನನ |
ಮೈಮೆಚ್ಚಿಕೆಗೆ ಮಖತುರಂಗದೊಡನಯ್ದಿದಂ |
ವೈಮಾನಿಕ ಪ್ರತತಿ ಬೆರಗಾಗೆ ಕಲಿ ಬಭ್ರುವಾಹನಂ ಕೂಡೆ ಬರಲು || 1 || 30 ||

**ಮಧ್ಯಮಾವತಿ – ತ್ರಿವುಡೆ (ಪ್ರಭೇದ)**
ಮೃಗಧರಾಂಶೋದ್ಭವ ಪರೀಕ್ಷಿತ |
ಮಗನೆ ಲಾಲಿಸಿ ಕೇಳ್ವುದಿತ್ತಲು |
ಸುಗುಣಶಿಖಿಕೇತುವಿನ ಪರಿಗಳ |
ಸೊಗಸಿನಿಂದಲಿ ಪೇಳ್ವೆನು | ತೋಷದಿಂದ || 1 ||

ಧರಣಿಯೊಳಗತ್ಯಧಿಕವಾಗಿಯೆ |
ಪರಮವೈಭವದಿಂದ ರಂಜಿಪ |
ವರಮಹಾರತ್ನಾಖ್ಯವೆಂಬತಿ |
ಮೆರೆವ ಸುಂದರ ನಗರದಿ | ವಿಭವದಿಂದ || 2 ||

ವೀರವೈಷ್ಣವಕುಲಶಿರೋಮಣಿ |
ಚಾರು ಹರಿಸದ್ಭಕ್ತನಾದ ಮ |
ಯೂರಧ್ವಜನೆಂಬಾಭಿಧಾನದಿ |
ಧಾರಿಣಿಯ ಪಾಲಿಸುತಲಿ | ಸಂಭ್ರಮದಲಿ || 3 ||

ಪರಮ ಪಾವನೆ ಸತ್ಪತಿವ್ರತೆ |
ವರ ಕುಮುದ್ವತಿಯೆಂಬ ರಾಣಿಯು |
ತರಳ ತಾಮ್ರಧ್ವಜನು ಸಹಿತತಿ |
ಹರುಷದಿಂದಿರುತಿರ್ದರು | ಕುಶಲದಿಂದ || 4 || 34 ||

**ವಾರ್ಧಕ**
ಕ್ಷಿತಿನಾಥ ಲಾಲಿಸಾ ಪುರದ ಜನಜಾಲ ಸಂ |
ತತ ಸೌಖ್ಯದಿಂದ ಬಾಳಿರೆ ಮಯೂರಧ್ವಜಂ |
ಯತಿಪೂಜೆ ವ್ರತ ತಪೋದಾನಧರ್ಮಂಗಳಿಂದತಿ ದುರಂಧರನೆನಿಸುತ ||
ಅತಿಭಕ್ತಿಯಿಂ ಹರಿಯನೀಕ್ಷಿಸಲ್ಪಿಂತೆ ಹಯ |
ಕ್ರತು ಮೇಳ ರಚಿಸಲಸದೃಶಮಾದ ವಿಷ್ಣು ಶ್ರೀ |
ಪತಿಯಂಘ್ರಿ ಕಾಂಬೆನೆಂದೆನುತ ಯೋಚನೆಯಿಂದ ಅರಸ ತಾನಿರುತಿರ್ದನು || 1 || 35 ||

**ಕೇದಾರಗೌಳ - ಅಷ್ಟ**
ಧರಣಿಪ ಲಾಲಿಸಿ ಕೇಳೊಂದು ದಿವಸದಿ |
ವರ ಮಯೂರಧ್ವಜನು ||
ಹರಿಯನಿನ್ನೆಂತು ಈಕ್ಷಿಪೆನೆಂಬ ಚಿಂತೆಯೊ |
ಳಿರೆ ಸುರಮುನಿನಾಥನು || 1 ||

ಮಧುದ್ವಿಷ ಹರಿ ಸರ್ವೋತ್ತಮ ಕೃಷ್ಣ ಸಲಹೆಂದು |
ಒದಗಿ ಹಂಸೆಯನೇರುತ ||
ಸದಮಲ ಬರೆ ದೂರದಲಿ ಕಂಡು ತ್ವರಿತದಿ |
ವಿಧಿಜನನಿದಿರ್ ಗೊಳುತ || 2 ||

ಕರೆದೊಯ್ದು ವರ ಸಿಂಹಾಸನವೇರಿಸುತ್ತಾಗ |
ಚರಣಾರ್ಚನೆಯನು ಗೆಯ್ದು ||
ಪರಮೋಲ್ಲಾಸದಿ ಪದಕೆರಗಿ ಸಂಸ್ತುತಿಸೆ ಭೂ |
ವರಗೆಂದ ಪ್ರತಿಯೊಲಿದು || 3 || 38 ||

**ಶಂಕರಾಭರಣ - ಏಕ**
ಶೀಲಸಾಧುಗುಣವಂತ | ಕೇಳು ನಾನೀಗೆಂಬ ಮಾತ |
ಜಾಲವಲ್ಲಾನನವು ಬಾಡಿ | ದಾಲಸ್ಯವೇನು || 1 ||

ಭೂಪರಾರೊ ಮುನಿದರೊ | ಕೋಪವಾರಮೇಲೆ ಮತ್ತೆ |
ಲೋಪಗೆಯ್ಯದೆನ್ನೊಳೀಗ | ನೀ ಪೇಳು ಬೇಗ || 2 ||

ಎಂದು ವೃತಿಪ ಪೇಳಲಾಗ | ಕಂದಿದಾನನದಿ ಭೂಪ |
ನಿಂದು ಕರವ ಮುಗಿಯುತೆಂದ | ನೊಂದು ವಾಕ್ಯವ || 3 || 41 ||

**ಮಧುಮಾಧವಿ - ಏಕ**
ಮುನಿರಾಯ ಕೇಳೆನ್ನ | ಮನದ ಯೋಚನೆಯ ||
ಎನುವೆ ನಿನ್ನೊಡನೀಗ | ಘನ ಕೃಪಾಂಬುಧಿಯೆ || 1 ||

ದಾನಧರ್ಮಗಳು | ನಾನಾ ಸುವ್ರತಗಳು ||
ಏನಮಾಡಿದರೇನು | ತಾ ನಿರರ್ಥಕವು || 2 ||

ಆರೊಂದು ಮಖ ಮಾಡಿ | ಮಾರಜನಕನ ||
ಚಾರುಪಾದದ ಸೇವೆ | ದೋರದೆ ಮುನ್ನ || 3 || 44 ||

**ಭಾಮಿನಿ**
ಆರ ತಪ ಕೆಡಿಸಿದೆನೊ ಪೂರ್ವದೊ |
ಳಾರ ವ್ರತಗಳನಳಿಸಿದೆನೊ ಕ |
ಣ್ಣಾರೆ ಕಂಡಂತಾಯ್ತು ಶ್ರೀವರನಡಿಯನೀಕ್ಷಿಸದೆ ||
ಧಾರಿಣಿಯೊಳಾನಾವ ಧಾರ್ಮಿಕ |
ಸಾರತರವಾದೇನು ಫಲವೆನೆ |
ಭೂರಮಣನೊಡನೆಂದ ನಸುನಗೆಯಿಂದ ವ್ರತಿವರ್ಯ || 1 || 45 ||

**ಮಧುಮಾಧವಿ - ಏಕ**
ಲಾಲಿಸೊ ನೃಪಕುಲಶೀಲ ನೀನೊಲಿದು |
ಪೇಳುವೆ ನಿನ್ನಾಲೋಚನೆಗಳ ತಿಳಿದು || ಪ ||
ಶೀಲಗುಣಾಢ್ಯರು ನಿನ್ನಿಂದ ಹಿಂದೆ |
ಬಾಳ ಯಾಗವ ಮಾಡಿ ಹರಿಯನೀಕ್ಷಿಸದೆ ||
ಆಲಸ್ಯಭರಿತರಾಗಿಂದೀವರೆಗೆ |
ನೀಲವರ್ಣನ ಕೃಪೆ ಪೆರ್ಚಿತು ನಿನಗೆ || ಲಾಲಿಸೊ || 1 ||

ಸ್ವಲ್ಪ ಮಾತ್ರದಿ ಬಹಳ ಸ್ಮರಿಸಿದೆನಯ್ಯ |
ಅಲ್ಪಕಾರ್ಯವೆ ಕಾಂಬ ಹರಿಯ ನೀನರಿಯ ||
ಕಲ್ಪಿತ ಮಾಡು ಮತ್ತೊಂದು ಯಾಗವನು |
ತಲ್ಪವ ನಿನಗಾತನೊಲಿದು ಶ್ರೀವರನು || ಲಾಲಿಸೊ || 2 || 47 ||

**ವಾರ್ಧಕ**
ವರವಸುಂಧರೆಯಧಿಪ ಲಾಲಿಸೀ ಪರಿಯಿಂದ |
ಲರುಪಿದು ಮಯೂರಧ್ವಜಕ್ಷಿತಿಪನಲ್ಲಿಂದ |
ಸುರವರಮುನೀಶ್ವರಂ ಮನದಿ ವೈಕುಂಠನಂ ಸ್ಮರಿಸಿ ನಡೆತರಲಿತ್ತಲು ||
ಪರಮ ಸತ್ಕೃಪೆಯಿಂದ ದೀಕ್ಷೆಯಂ ಕೈಗೊಂಡು |
ವರ ನರ್ಮದಾ ತಟಕೆ ಪೋಪ ಮನನಾಗುತತಿ |
ಹರುಷದೊಳ್ ತನ್ನ ನಿಜಮಂತ್ರಿ ನಕುಲಧ್ವಜನ ಕರೆದಾಗಲಿಂತೆಂದನು || 1 || 48 ||

**ಭೈರವಿ - ಝಂಪೆ**
ಕೇಳಯ್ಯ ಮಂತ್ರಿ ಕುಲ | ತಿಲಕ ನಾ ಪೇಳ್ವೆ |
ಶೀಲಸದ್ವಿಷ್ಣು ಸ್ಮರ | ಲೋಲಮಿತ ಕೇಳ್ವೆ || ಕೇಳಯ್ಯ || ಪ ||
ಹಿಂದೇಳು ಯಾಗಗಳ | ಒಂದೆ ಮನದೊಳು ನಡೆಸಿ |
ಇಂದಿರಾವರನಡಿಯ | ಇಂದು ಪರಿಯಂತ || ಕೇಳಯ್ಯ || 1 ||

ಗೋಚರಿಸಲಿಲ್ಲೊಂದು | ನಾ ಚಿಂತೆಯೊಳಗಿರಲು |
ಆ ಚತುರ್ಮುಖನಣುಗ | ನಾಚರಿಸು ಮಖವ || ಕೇಳಯ್ಯ || 2 ||

ಕಡಲಸುತೆ ಶ್ರೀಲಕ್ಷ್ಮಿ | ಯೊಡೆಯನಂಘ್ರಿಯು ನಿನಗೆ |
ಬಿಡದೆ ತೋರುವದೆಂದು | ನಡೆದ ಮುನಿರಾಯ || ಕೇಳಯ್ಯ || 3 ||

ಆದರಿಂದ ಪಟ್ಟಣವ | ನೊದಗಿನಲಿ ಶೃಂಗರಿಸು |
ಮುದದಿ ಸನ್ನಹವಾಗ | ಲಿದೆ ಸಮಯವೀಗ || ಕೇಳಯ್ಯ || 4 || 52 ||

**ವಾರ್ಧಕ**
ಸಚಿವನೊಡನಿಂತರುಹೆ ಸಕಲ ಸನ್ನಾಹಮಂ |
ರಚಿಸಲಾಕ್ಷಣ ತನ್ನ ಸತಿಯನೊಡಗೊಂಡು ಗುರು |
ಪ್ರಚುರನಹ ಶಂಖಲಿಖಿತರ ನೇಮದಿಂದಯ್ದಿ ವರ ನರ್ಮದಾ ತೀರದಿ ||
ಶುಚಿತೋಕ್ತಯುಕ್ತರತಿಯಿಂ ನಡೆಸಿ ಸಾಂಗದಿಂ |
ದಚಲಾರಿಯೊತ್ತಿನವನಂ ನಿರ್ಮಿಸಲ್ ಸ್ಥಳವ |
ಸೃಜಿಸಲಾ ಸಮಯದೊಳ್ ಹಯವಿದಿರಿನೊಳ್ ನಿಲಿಸಿ ಸುತಮುಖ್ಯರತಿ ವಿಭವದಿ || 1 || 53 ||

**ಭಾಮಿನಿ**
ಕೇಳು ಜನಮೇಜಯ ಮಹೀಪತಿ |
ಪೇಳುವೆ ಮಯೂರಧ್ವಜ ಕ್ಷಿತಿ |
ಪಾಲ ಸತಿಸುತ ಮುಖ್ಯ ಬಾಂಧವಜಾಲ ಮೊದಲಾಗಿ ||
ಮೇಳವಿಸಿ ಹಯಕ್ರತುವರಂಭದಿ |
ಶೀಲದೀಕ್ಷೆಯೊಳಿರುವನೆಂಬುದ |
ಕೇಳುತಲೆ ಬುಧಜಾಲವಯ್ದಿತು ಶರಧಿಘೋಷದಲಿ || 1 || 54 ||

**ಮಧ್ಯಮಾವತಿ - ಅಷ್ಟ**
ಏನೆಂಬೆ ವಿಪ್ರಗಡಣವನ್ನು | ಬಂದು |
ತಾನೆ ತುಂಬಿತು ರತ್ನನಗರವನ್ನು || ಏನೆಂಬೆ || ಪ ||
ಪಟ್ಟೆದಡಿಯ ಧೋತ್ರಂಗಳನುಟ್ಟು | ನೆರಿ |
ಬಿಟ್ಟು ಕೈಯಲಿ ಪುಸ್ತಕವ ಪಿಡಿದು ||
ಒಟ್ಟಾಗಿ ವೇದಶಾಸ್ತ್ರವನೆಲ್ಲ ವಾಗ್ವಾದ |
ಗುಟ್ಟುತ್ತ ಪಣೆಯೊಳು ಬೊಟ್ಟಿಟ್ಟು ಹರುಷದಿ || ಏನೆಂಬೆ || 1 ||

ಕರದಿ ಪವಿತ್ರವ ಗೋಪಿಚಂದನಗಳ |
ಧರಿಸಿ ತ್ರಿಪುಂಡ್ರವ ಮೆರೆಯುತಲಿ ||
ಪರಿಪರಿಲಂಕಾರವೆಸಗುತ್ತ ನಾನಾ |
ತರದ ಜಾತಿಯ ಬುಧರ್ವೆರೆದು ಸದ್ಘೋಷದಿ || ಏನೆಂಬೆ || 2 ||

ಸಣ್ಣ ಚೆಲುವರೆಳೆಪ್ರಾಯದಿ ನಡೆವರು |
ಹಣ್ಣು ಮುದುಕರತಿ ಸಂಭ್ರಮದಿ ||
ಎಣ್ಣಿಸಲರಿಯೆ ಕೃಶಾನುಹೋತ್ರಿಗಳೆಲ್ಲ |
ಉಣ್ಣುವಾಸೆಗಳು ಬಲ್ ಎಣ್ಣಿಸಿ ಬೇಗದಿ || 3 || 57 ||

**ಭಾಮಿನಿ**
ವರಪರೀಕ್ಷಿತತರುಣ ಕೇಳೀ |
ಪರಿಯೊಳಯ್ದಿಹ ಪಾರ್ವರನು ಬಲು |
ತರದಿ ಮನ್ನಿಸಿ ನೃಪತಿ ಸನ್ಮತದಿಂದ ಶಾಲೆಯನು ||
ಸುರುಚಿರಾಲಂಕೃತದೊಳೆಸಗುತ |
ಪರಮ ಪಾವನನನಲಕುಂಡದಿ |
ಬರಿಸಿ ಶಾಸ್ತ್ರೋಕ್ತಿಯಲಿನಿತ್ಯಾಹುತಿಯೊಳ್ ದಣಿಸಿದರು || 1 || 58 ||

**ಕಾಪಿ - ಅಷ್ಟ**
ತಂಡತಂಡದಿ ಭೂಮಿದ್ವಿಜರು | ಯಜ್ಞ |
ಕುಂಡದಿ ಸುತ್ತಲು ಕುಳಿತು ಮತ್ತವರು ||
ಮಂಡಿಸಿ ಸ್ವರದೀರ್ಘಾಯುತರು | ಸುಪ್ರ |
ಚಂಡ ಪಾವಕನನಾಹುತಿಯೊಳ್ ದಣಿಸಿದರು || 1 ||

ಸಮಿಧಾಜ್ಯಖಿಳ ಭಕ್ಷ್ಯಗಳನು | ಇತ್ತ |
ರಮಿತ ಪಾಯಸ ಚರು ಕುಶ ತಿಲಗಳನು ||
ಸಮನಿಸುತೆಲ್ಲ ಸಾಮ್ಯವನು | ಇತ್ತ |
ರಮರಬಾಣಸಿಗುಣಬಡಿಸಿ ತೃಪ್ತಿಯನು || 2 ||

ಇಂತಾನಿಮಿಷರ ಸಂತೈಸಿ | ಲಕ್ಷ್ಮೀ |
ಕಾಂತನ ಕೃಪೆಯಾಗಲೆನುತಲುಚ್ಚರಿಸಿ ||
ಸಂತಸದಿಂದೆಲ್ಲರ್ ಭಜಿಸಿ | ಭೂ |
ಕಾಂತನಿಗೆಲ್ಲರಾಶಿರ್ವಾದಗೆಯ್ದು || 3 || 61 ||

**ವಾರ್ಧಕ**
ಕ್ರತುಮುಖದಿ ಸುರರ ಸಂತರ್ಪಣೆಯ ಕೊಳಿಸುತ್ತ |
ಪ್ರಥಮದೊಳ್ ನವಗ್ರಹಂಗಳನು ಪ್ರಾರ್ಥನೆಗೆಯ್ದು |
ಪೃಥಿವಿಸುರರನು ದಾನಧರ್ಮ ದಕ್ಷಿಣೆಯಿಂದ ಸಂತುಷ್ಟಿಯಂ ಪಡಿಸುತ ||
ಪ್ರಥುಳಬಲನಾ ಮಯೂರಧ್ವಜ ಕ್ಷಿತಿಪನು |
ನ್ನತವಚನದಿಂದಾತ್ಮಪುತ್ರನಂ ಕರೆದಾಗ |
ಪೃಥಿವಿಪರ ಮೇಲೆ ಹಯಮಂ ಬಿಟ್ಟು ಕಪ್ಪಮಂ ತರುವುದೆಂತೆನಲೆಂದನು || 1 || 62 ||

**ಕಾಂಭೋದಿ - ಅಷ್ಟ**
ತಾತ ಲಾಲಿಸಿ ಕೇಳ್ ಬಿನ್ನಪವ | ಇಂಥ |
ಮಾತಿನೊಳೇನು ಸಂಶಯವ ||
ಖ್ಯಾತ ನಿಮ್ಮಡಿದಯಮಾತ್ರದಿಂದವನೀಶ |
ವ್ರಾತವ ಗೆಲಿದು ವಿಖ್ಯಾತಿ ಹಬ್ಬಿಸುವೆನು || 1 ||

ದೀಕ್ಷೆಯಿಂದಿರು ನೀನು ಮುದದಿ | ಬೇರೆ |
ಪೇಕ್ಷಿಸಬೇಡಿನ್ನು ಧುರದಿ ||
ಲಕ್ಷ್ಯವೆ ಮೂರ್ಖರ ಶಿಕ್ಷಿಸುವೆನು ನಮ್ಮ |
ಪಕ್ಷಕಯ್ತರುವರ ರಕ್ಷಿಸಿ ತರುವೆನು || 2 ||

ನೇಮಿಸಪ್ಪಣೆಯೆನಲಾಗ | ಲತಿ |
ಪ್ರೇಮದಿ ಮಗನನು ಬೇಗ ||
ಕಾಮಜನಕ ನಿನ್ನ ಸಾಮದಿ ಸಲಹಲೆಂ |
ದಾ ಮಯೂರಧ್ವಜ ತಾ ಮಮತೆಯೊಳೆಂದ || 3 || 65 ||

**ಭಾಮಿನಿ**
ಯಜ್ಞಮಂಟಪದಿಂದ ತಾತನ |
ನುಜ್ಞೆಯಂ ಕೈಗೊಳುತ ಹಯ ಸಹ |
ಸಜ್ಜನಸಮೇಳದಲಿ ತಾಯನು ಕಂಡು ಪದಕೆರಗಿ ||
ದುರ್ಜನಾರಿಯ ಸ್ಮರಿಸಿ ಮನದಲಿ |
ನಿರ್ಜರೇಂದ್ರನು ಸಲಹಲೆನುತಲಿ |
ತಜ್ಜನನಿ ಪರಸುತ್ತ ಮಂಗಲಮತಿಯೊಳುಸಿರಿದಳು || 1 || 66 ||

**ನಾಟಿ - ಝಂಪೆ**
ಮತಿವಂತನಾಗು | ಶ್ರೀಪತಿಪ್ರೀತನಾಗು |
ಕ್ಷಿತಿಪರನು ಗೆದ್ದು ಸಂಯುತಭಾಗ್ಯನಾಗು ||
ಮತಿವಂತನಾಗು || ಪ ||
ಹರಿಯ ನೆವದಲಿ ಪೋಗಿ | ಧರೆಯ ಕಪ್ಪವ ಬಯಸಿ |
ಹರಿಶರಣರೊಡನೆ ದ್ವೇಷವ ಬಲಿಯದೆ ||
ಅರಿತವರ ತಾರತಮ್ಯದಿ ಪ್ರಬಲರೊಳು ಸ್ನೇಹ |
ವೆರೆದು ಸಂಧಿಯ ಮಾಡಿ ವೀರಭಟನೆನಿಸಿ || ಮತಿವಂತನಾಗು || 1 ||

ಜಾತಿಭೇದಗಳರಿತು | ನೀತಿ ಧರ್ಮದೊಳಧಿಕ |
ಖ್ಯಾತನೆಂದೆನಿಸಿ ಭೂ | ನಾಥರೊಳು ರಣದಿ ||
ಭೀತಿಗೊಳದಿರು ಲಕ್ಷ್ಮಿ | ನಾಥನನು ಸ್ಮರಿಸುತ್ತ |
ಖ್ಯಾತಿಗೊಳು ಜಯಕಾಂತೆ | ತಾ ಸೇರಿಬಹಳು || ಮತಿವಂತನಾಗು || 2 || 68 ||

**ಸೌರಾಷ್ಟ್ರ - ತ್ರಿವುಡೆ**
ಜನಕಜನನಿಯರೊಡನೆ ನೇಮವ |
ಸನುಮತದಿ ಕೈಗೊಂಡು ಗುರು ಬುಧ |
ಜನರ ವಂದಿಸಿ ಲಿಖಿತ ಕುದುರೆಯ | ಫಣೆಗೆ ಕಟ್ಟಿ || 1 ||

ಏಕಪ್ರಾಯಸಮರ್ಥರುಗಳಾ |
ನೇಕ ಸಂಗ್ರಾಮದೊಳು ತಾವೇ |
ಝೇಂಕರಿಸಿ ಹೊರವಡುವುತಿರೆ ಮೂ | ಲೋಕ ಬೆದರೆ || 2 ||

ಚಾರುವಾದ್ಯ ನಗಾರಿ ತಂಬಟೆ |
ಭೇರಿ ಕಹಳಾರವಗಳಾಗಲು |
ನಾರಿಯರು ಆರತಿಯ ವೇಗದಿ | ತೋರಿಸಿದರು || 3 || 71 ||

**ಧವಳಾರ - ಅಷ್ಟ**
ವಸುಧೇಶಸುತ ತಾಮ್ರಕೇತುವಿಗೆ | ಚೆಲ್ವ |
ಶಶಿವದನೆಯರಾರತಿಯೆತ್ತಿರೆ ||
ವಸುಧೇಶಸುತ ತಾಮ್ರಕೇತುವಿಗೆ || ಪ ||
ಪ್ರಕಟಭುಜಾನ್ವಿತ ನಕುಲಕೇತುಗೆ ಮುಖ್ಯ |
ಸಖಿಜನರೆಲ್ಲರಾರತಿಯೆತ್ತಿರೆ ||
ಮಕರಕೇತನ ಶತಲಾವಣ್ಯನಾಗಿಹ |
ಶಿಖಿಕೇತುಸುತನಿಗಾರತಿಯೆತ್ತಿರೆ ||
ವಸುಧೇಶಸುತ ತಾಮ್ರಕೇತುವಿಗೆ || 1 || 72 ||

**ವಾರ್ಧಕ**
ಚಿತ್ರವಿಸು ಧರಣೀಶನಿನಿತು ವೈಭವದಿಂ ಸ |
ಮಸ್ತರೊಳ್ ಮತಿಯ ಬೇಡುತ ಯಾಗಹಯಗೊಂಡು |
ಉತ್ತಮ ಗಜಾಶ್ವ ರಥ ರಥಿಕರಂ ಕೂಡಿಕೊಂಡತ್ಯಧಿಕ ಹರುಷದಿಂದ ||
ಮತ್ತೆ ನಕುಲಧ್ವಜ ಸಮೇತದಿಂ ರಥದ ಮೇಲ್ |
ಹತ್ತಿ ತಾಮ್ರಧ್ವಜಂ ನಡೆತರಲ್ ಮುಂದೆ ಕ |
ಯ್ಯೆತ್ತಿ ಪಾಠಕರುಲಿಯೆ ವಾದ್ಯಘೋಷಂಗಳಿಂ ಪೊರಟರಾನೇವೇಳ್ವೆನು || 1 || 73 ||

**ಕಾಂಭೋದಿ - ಝಂಪೆ**
ಸಿಂಧೂರನಗರಪತಿ ಕೇಳಿನಿತು ಸನ್ನಾಹ |
ದಿಂದ ಮಾರ್ಬಲ ಕೂಡಿ ಭರದಿ ||
ಬಂದುದೈ ತುರಗ ತಾಮ್ರಧ್ವಜಾದ್ಯರ ಕಾವ |
ಲಿಂದ ಭಟರುಗಳ ಸಂಭ್ರಮದಿ || 1 ||

ಆನೆ ರಥ ತುರಗಗಳು ನಡೆವಬ್ಬರಕೆ ಧರಣಿ |
ತಾನೆ ತಗ್ಗಲು ಕುಸಿದನಹಿಪ ||
ಸೇನಾಧಿಪತಿಗಳಯ್ತರಲಾಗ ಪೌರುಷವ |
ನೇನೆಂಬೆ ಕಳವಳವ ಜನಪ || 2 ||

ದಿಗ್ಗಜಾವಳಿಗಳಲ್ಲಾಡುವತಿವಿಕ್ರಮದ |
ಸುಗ್ಗಿಯಲಿ ಲೋಲಾಡುತಾಗ ||
ನುಗ್ಗರಿವೆ ವೈರಿಗಳನೆನೆ ಕುಲಾದ್ರಿಗಳೆಲ್ಲ |
ತಗ್ಗು ವಂತಯ್ದಿದರು ಬೇಗ || 3 || 76 ||

**ಸಾಂಗತ್ಯ - ರೂಪಕ**
ಮತ್ಸ್ಯಜೆಯಣುಗನಾತ್ಮಜ ಲಾಲಿಸೀಪರಿ |
ಯುತ್ಸಾಹದೊಳು ತಾಮ್ರಧ್ವಜನು ||
ಸಚ್ಚಿತ್ತರೊಡಗೂಡಿ ಹಯಗೊಂಡಯ್ತರುತಿರೆ |
ತತ್ಸಮಯದಿ ಪಥದೊಳಗೆ || 1 ||

ಶುಂಡಾಲನಗರೇಶನ ಧ್ವರಹಯವನು |
ಕೊಂಡು ತಾ ರಭಸದಿಂದಾಗ ||
ಚಂಡವಿಕ್ರಮಸೇನೆ ವರಸುಭದ್ರಾಪತಿ |
ಪುಂಡರೀಕಾಕ್ಷರಯ್ತರಲು || 2 ||

ಬಟ್ಟೆಯೊಳಾ ಮಯೂರಧ್ವಜನಣುಗ ಮು |
ಮ್ಮೆಟ್ಟುತವರನು ಲೆಕ್ಕಿಸದೆ ||
ಅಟ್ಟಾಸದೊಳು ಬರುವುದ ಕಂಡು ತುರಗವ |
ಬಿಟ್ಟರಾ ಹಯದ ಸಮ್ಮುಖಕೆ || 3 || 79 ||

**ವಾರ್ಧಕ**
ಕ್ಷೋಣೀಂದ್ರ ಕೇಳಿನಿತು ತುರಗಮಾಕುದುರೆಯಂ |
ಕಾಣುತಲಿ ಧ್ವನಿಗೆಯ್ದು ಹರಿತಂದು ಮೊಗದೊಳಾ |
ಘ್ರಾಣಿಸಿ ಮಿಳಿರ್ಚಿ ಕಿವಿಗಳನೊಡನೆ ತೆರೆ ತೆರೆದು ಮುಂಗಾಲ್ಗಳಿಂದ ನಡೆದು ||
ಮೇಣೊಂದನೊದೆದು ಲಂಘಿಸುತಾ ತುರಂಗಗಳು |
ಮಾಣದಡಿಗಡಿಗೆ ಧರೆಗುರುಳಿ ಬಿದ್ದೇಳುತ್ತ |
ಮಾಣಿಕ್ಯ ಮುಕ್ತಾಳಿಗಳ ಭೂಷಣಂಗಳಂ ಪರಿದಿಕ್ಕಿ ಬಿರಿಗೊಂಡವು || 1 || 80 ||

**ಭಾಮಿನಿ**
ಈ ತೆರದಿ ಮಖತುರಗವೆರಡುರೆ |
ಖಾತಿಗೊಳುತಿರೆ ಪಥದಿ ಕಾಯ್ದಿಹ |
ದೂತರದನೀಕ್ಷಿಸುತ ಪೊರಮಟ್ಟಧಿಕವೇಗದಲಿ ||
ಆತುರದೊಳವರಯ್ತರುತ ಶಿಖಿ |
ಕೇತುನಂದನಗೆರಗುತವರತಿ |
ಭೀತಿಯಿಂ ಕೈಮುಗಿವುತಿಂತೆಂದೊರೆದರಡಿಗಡಿಗೆ || 1 || 81 ||

**ಮುಖಾರಿ - ಏಕ**
ಲಾಲಿಸಿ ಕೇಳೆಮ್ಮ ಬಿನ್ನಪವ | ಶಿಖಿಕೇತುಜಾತ |
ಲಾಲಿಸಿ ಕೇಳೆಮ್ಮ ಬಿನ್ನಪವ || ಪ ||
ಭೂರಿ ಮಾರ್ಬಲವು ಬಂದೀಗ | ನಮಗೆ ಅಡ್ಡ |
ದಾರಿಯ ಕಟ್ಟಿ ಅಶ್ವಕೀಗ | ಸ್ವಾರಿಯ ಬಿಟ್ಟು |
ಚಾರು ಪೌಜಿದಿರೊಡ್ಡಿ ಬೇಗ ||
ಮಾರನ ರೂಪದಿ ಕಾರಿ ಶರಾಸನ |
ದಾರಿಗಳತಿವೀ ಚಾರುಭೂಷಣ ಬಲು |
ಭೇರಿ ತಂಬಟೆ ನಗಾರಿ ವಾದ್ಯದ ಸ್ವರ |
ಘೋರಿಸಿ ಧನುವಿಂಗೇರಿಸಿ ಬಾಣವ || ಲಾಲಿಸಿ || 1 ||

ಚೆಲುವರೈದಿಕ್ಕಿಗೀಗ | ನಮ್ಮವರ್ ಸೋಕ |
ಲೊಲ್ಲರು ಸಮ್ಮುಖಕೀಗ | ಪೇಳುವುದೇನೈ |
ಬಲ್ಲಿದ ವಿಕ್ರಮರೀಗ ||
ಅಲ್ಲಲ್ಲಿಗೆ ಖಡ್ಗಾಯುಧಗಳು ಬಲು |
ಝಲ್ಲಿಸಿ ವೀರರ ಕೊಲ್ಲಲಿಕೆಸುವವ |
ರೆಲ್ಲೆಂಬರು ಬಲು ಝಲ್ಲಿಗಳಾಡುತ |
ರಿಲ್ಲದೆ ಮುಂದಿಹರೆಲ್ಲ ಪರಾಕೆ || ಲಾಲಿಸಿ || 2 || 83 ||

**ಭಾಮಿನಿ**
ದೂತರೆಂದುದ ಕೇಳುತಲೆ ವಿ |
ಖ್ಯಾತ ತಾಮ್ರಧ್ವಜನು ಮನದೊಳು |
ಖಾತಿಗೊಳ್ಳುತ ಮಂತ್ರಿ ನಕುಲಧ್ವಜನ ಕರೆದಾಗ ||
ನೀ ತಿಳಿದು ಬಾರಾರ ಹಯವೆಂ |
ದೋತು ನುಡಿಯಾಲಿಸುತ ಸಚಿವನು |
ತಾ ತತುಕ್ಷಣ ಪೇಳ್ದನು ನಯೋಕ್ತಿಯಲಿ ಭೂಪನೊಳು || 1 || 84 ||

**ರೇಗುಪ್ತಿ - ಅಷ್ಟ**
ಜೀಯ ಲಾಲಿಸಿ ಕೇಳೀಗ | ಬೀಯವಾಗಲೇಕೊ ಬೇಗ |
ಕಯ್ಯೆತ್ತಿ ನಿನ್ನೊಡನಾರಿನ್ನು | ಬರುವರಿನ್ನು || 1 ||

ಯಾಗಸನ್ನಾಹಗಳನ್ನು | ಬೇಗಗೊಂಡು ಬಭ್ರುವಾಹನ |
ಸಾಗಿ ತವ ಪಿತನ ಬಳಿಗೆ | ಪೋಪನೊ ಹೀಗೆ || 2 ||

ಛಪ್ಪನ್ನದೇಶಾಧೀಶರು | ಕಪ್ಪ ನಿನಗೀಯದಾರು |
ಬಪ್ಪರಿಹರೇನಯ್ಯ ಧುರಕೆ | ಏಕೆ ಪರಾಕೆ || 3 || 87 ||

**ಭಾಮಿನಿ**
ಆರು ನಮಗಿದಿರಹರೆ ಲೋಕದಿ |
ಚಾರು ಕಾಣಿಕೆ ತಂದೆಗೀವರೆ |
ಸಾರುವರು ರಥ ತುರಗ ಸಹಿತೆನೆ ವೀರನದ ಕೇಳ್ದು ||
ಭೂರಿ ತೋಷವ ತಾಳ್ದು ಮನದೊಳು |
ಕಾರಣೀಕನು ರಾತ್ರಿ ತನ್ನೊಳು |
ನಾರದನು ತಿಳುಹಿದುದ ಮಂತ್ರಿಯೊಳೊರೆದನಾತನು ತಾ || 1 || 88 ||

**ಕಾಂಭೋದಿ - ಏಕ**
ಶ್ರೃಣ್ಮಂತ್ರಿ ನಾ ನಿನ್ನೊಳೆನುವೆ |
ಪೆಣ್ಣೆವಚನವೀಗ ||
ಕಣ್ಣೆಬಲವಾರೆಂಬುದೆಮ್ಮ |
ಮಾಣ್ಮರಲ್ಲ ಬೇಗ || 1 ||

ಸುರಮುನಿ ನಾರದ ನಿನ್ನೆ |
ಒರೆದನು ರಾತ್ರಿಯೊಳ್ ತಾನೆ ||
ಧರಣಿಪರ್ ನಿನ್ನಲಿ ಸೆಣಸಲ್ |
ಬರುವರೆಂದನೈ ಪ್ರತ್ಯಕ್ಷ || ಶೃಣ್ಮಂತ್ರಿ || 2 ||

ಶುಂಡಾಲಪುರದರಸನಂತೆ |
ಮಂಡಲಾಧಿಪತಿಗಳಂತೆ ||
ಚಂಡಬಲಕರ್ಣಜರ್ ಕಾಮ |
ಗಂಡುಗಲಿಗಳೆಲ್ಲರ್ ಕೂಡಿ || ಶೃಣ್ಮಂತ್ರಿ || 3 ||

ಧುರಧೀರ ಸಾಲ್ವಾನಿರುದ್ಧ |
ವರ ಭುಜಾದಿ ಯದು ವರ್ಗದ ||
ದೊರೆ ಶ್ರೀಕೃಷ್ಣಾರ್ಜುನರು ಮುಖದ |
ತುರಗವ ತರುವರೆಂಬುದ || ಶೃಣ್ಮಂತ್ರಿ || 4 || 92 ||

**ವಾರ್ಧಕ**
ದಿಟವಚನಮಿದು ಸಚಿವ ಬೇರೆ ಸಂಶಯವೇನು |
ಪಟುಪರಾಕ್ರಮವೆಂದು ತುರಗಕಿದಿರಶ್ವ ಸಂ |
ಘಟಿಸಿ ಬಿಟ್ಟಿಹರೆಮ್ಮವೋಲ್ ಕಾಣುತಿದೆ ಪಿತನ ಬಳಿಗೊಯ್ವ ತಪ್ಪಲ್ಲವೈ ||
ಘಟಿಕೆಮಾತ್ರದೊಳೀಗ ತುರಗಮಂ ತರಿಸೆನಲ್ |
ಲಟಕಟಿಪ ವಾಜಿಯಂ ಪಿಡಿದು ಮಸ್ತಕದ ದು |
ರ್ಘಟ ಲಿಖಿತ ಪತ್ರಿಕೆಯ ತೆಗೆದು ನಕುಲಧ್ವಜಂ ತೆರೆದೋದಿ ಪೇಳ್ದ ನೃಪಗೆ || 1 || 93 ||

**ಸೌರಾಷ್ಟ್ರ - ತ್ರಿವುಡೆ**
ತಾರಕೇಶಕುಲಾಬ್ಧಿಚಂದ್ರನು |
ದಾರಗುಣಗಂಭೀರ ವಿಷ್ಣು ಪ |
ದಾರವಿಂದವನೊಲಿಸಿಕೊಂಡಿಹ | ಚಾರುಶೌರ್ಯ || 1 ||

ಪೃಥ್ವಿಗತ್ಯಧಿಕಾಗಿ ಶೋಭಿಪ |
ಹಸ್ತಿನಾಪುರದರಸ ಧರ್ಮಜ |
ವಿಸ್ತರಿಸಿದತಿಯಾಗ ಹಯವಿದು | ಶಕ್ತಿಯಿಹರು || 2 ||

ದಿಟ್ಟರಾರಿದ ಕಟ್ಟಿದವರೆದೆ |
ಮೆಟ್ಟಿ ಕ್ಷಣದಲಿ ಬಿಡಿಸಿಕೊಳುವತಿ |
ಶ್ರೇಷ್ಠಬಲನರ್ಜುನಗೆ ಕಪ್ಪವ | ಕೊಟ್ಟು ಬಾಳ್ವ || 3 ||

ಶರಣರನು ಪಾಲಿಸುವನೆಂಬೀ |
ಬಿರುದ ತಾಮ್ರಧ್ವಜನು ಕೇಳುತ |
ತಿರುಹಿ ಮೀಸೆಯ ಹೊಯ್ದು ಭುಜಗಳ | ನೊರೆದನಾಗ || 4 || 97 ||

**ಕೇದಾರಗೌಳ - ಝಂಪೆ**
ಭಳಿರೆ ಮಂತ್ರೀಶ ಕೇಳು | ಪತ್ರಿಕೆಯ |
ತಿಳಿದು ಬರೆದಿಹ ಕೃಪಾಳು ||
ಇಳೆಗಧಿಕ ತಾನೆನುತಲಿ | ತನ್ನ ಹೆ |
ಗ್ಗಳಿಕೆ ತಾನೆನುವ ಜಲ್ಲಿ || 1 ||

ಬಿಡು ಬಿಡವರಧಟನೀಗ | ನಿಲಿಸುವೆನು |
ತಡೆಯದರ್ಜುನನ ಬೇಗ ||
ಕಡುಗಲಿತ್ವವ ನಿಲಿಸುವೆ | ನಿಮಿಷದೊಳ್ |
ಪಡೆಸಹಿತ ನುಗ್ಗರಿಯುವೆ || 3 ||

ಪಿಂತೇಳು ಯಾಗಗಳನು | ಮಾಡಿದರು |
ಕಂತುಪಿತನಂಘ್ರಿಗಳನು ||
ಚಿಂತಿಸುವೆ ಕಾಣೆನೆಂದು | ಶ್ರೀಲಕ್ಷ್ಮಿ |
ಕಾಂತನನು ಧುರದೊಳಿಂದು || 3 ||

ಮೆಚ್ಚಿಸುತ ಕೊಂಡೊಯ್ವೆನು | ಪಿತನ ಮನ |
ದಿಚ್ಛೆ ಸಲಿಸದೆ ಉಳಿಸೆನು ||
ತುಚ್ಛರಾ ಕರ್ಣಜರನು | ಎಂದೆಂದು |
ಎಚ್ಚರಿಸುವಂತೆಸುವೆನು || 4 ||

ಪಾಂಡವರ ಯಾಗನೆವದಿ | ಬಂತೀಗ |
ಪಾಂಡುರಂಗನೊಳು ಮುದದಿ ||
ಪಾಂಡಿತ್ಯ ತೋರುವುದಕೆ | ಧುರಕೀಗ |
ಝಾಂಡೆ ನಡೆಯಲಿ ಮುಂದಕೆ || 5 || 102 ||

**ಭಾಮಿನಿ**
ಕ್ಷಿತಿಪ ಕೇಳಿಂತುಸಿರೆ ಮಾರ್ಬಲ |
ಖತಿಗೊಳಲು ನಿಲಿಸ್ಯರ್ಧಚಂದ್ರಾ |
ಕೃತಿಯೊಳೆಂದೆನಲಾಗ ಪರಬಲದೊಳಗೆ ಬಳಿಕಿತ್ತಾ ||
ಪೃಥುಳಬಲ ಪ್ರಾರ್ಥನಿಗೆ ಲಕ್ಷ್ಮೀ |
ಪತಿ ಮಯೂರಧ್ವಜನ ಪರಿಗಳ |
ಶ್ರುತಗೊಳಿಸುತಿರ್ದನು ವಿಲಾಸದೊಳೊರೆವೆ ತಾನೆಂದು || 1 || 103 ||

**ಸುರುಟಿ - ಅಷ್ಟ**
ಲಾಲಿಸು ಪಾರ್ಥ ನೀನು | ನಾ ನಿನ್ನೊಳು |
ಪೇಳುವ ನುಡಿಗಳನು ||
ಜಾಲವಲ್ಲಿನ್ನಿದಿರು ನಿನ್ನೊಳು |
ಕಾಳಗಕೆ ನಿಂದಿರುವ ಭಟ ಕ |
ಟ್ಟಾಳು ವೈಷ್ಣವಶೀಲ ಪೃಥ್ವೀ |
ಪಾಲರೊಳಗಗ್ಗಳ ಬಲಾನ್ವಿತ || ಲಾಲಿಸು || 1 ||

ಈ ನಗರಾಧಿಪನು | ಬಲವಂತನು |
ಆ ನರ್ಮದೆಯೊಳು ತಾನು | ದೀಕ್ಷೆಯಕೊಂಡು |
ದಾನಧರ್ಮಂಗಳನು | ಸಾಂಗದೊಳಿನ್ನು ||
ತಾ ನಡೆಸಿ ಹರಿಯಂಘ್ರಿ ಕಮಲ |
ಧ್ಯಾನಪರನಾಗಿಹನು ತನ್ನಯ |
ಸೇನೆ ತುರಗವ ಸಹಿತ ನಡೆಸಿಹ |
ಸೂನು ತಾಮ್ರಧ್ವಜನ ಕಾಯ್ಪಲಿ || ಲಾಲಿಸು || 2 ||

ದೇಶದ ಮೇಲಿವರು | ಕಪ್ಪವ ತರ |
ಲೀಸು ಮಾರ್ಬಲವೆಲ್ಲರು | ವಿಲಾಸದ |
ಘೋಷದೊಳಯ್ತಹರು | ಯುದ್ಧದೊಳಿಂದು ||
ವಾಸವಾದ್ಯರ ಲೆಕ್ಕಿಸನು ಸಮ |
ರಾಸಮರ್ಥನ ಜಯಿಸುವತಿಭಟ |
ರೀಸು ಬಲದೊಳಗಾರು ನಮ್ಮನು |
ಘಾಸಿಮಾಡುವನೈ ಪರಾಕ್ರಮಿ || ಲಾಲಿಸು || 3 || 106 ||

**ಭಾಮಿನಿ**
ಇಂತು ತಾಮ್ರಧ್ವಜನ ವಿಕ್ರಮ |
ವಂತರಂಗದಿ ವಾಸವಿಗೆ ಶ್ರೀ |
ಕಾಂತ ಸೂಚಿಸಲರಿತು ವರಸಾಲ್ವಾಖಿಳೇಶ್ವರರು ||
ಅಂತು ಭುಜಗಳ ಕರ್ಣಸುತ ರತಿ |
ಕಾಂತ ಮೊದಲಾದವರು ಪೌರುಷ |
ವಾಂತು ಪೀತಾಂಬರನಿಗೆರಗುತಲೆಂದರಡಿಗಡಿಗೆ || 1 || 107 ||

**ಮಾರವಿ - ಅಷ್ಟ**
ಲಾಲಿಸೈ ಬೇಗ | ಯಾದವರಾಯ | ಲಾಲಿಸೈ ಬೇಗ ||
ಲಾಲಿಸೈ ನಾವೆನುವ ಬಿನ್ನಹ |
ಪಾಲಿಸೈ ಶ್ರೀಲೋಲ ದುರ್ಜನ |
ಜಾಲಹರ ಗೋವಿಂದ ಸಜ್ಜನ |
ಪಾಲ ಮನುಮುನಿವಂದ್ಯನಂದದಿ || ಲಾಲಿಸೈ || ಪ ||
ನೀಡೆಮಗೆ ನೇಮವನು ಬೇಗದಿ ಶೌರ್ಯವೇನೈ | ನಿಂತಿಹ |
ಖೋಡಿಯನು ಮುರಿಸುವೆವು ಈಗ ನೋಡು ನೀನು | ವಿಕ್ರಮ |
ವಾಡಲತಿಬಲಾಢ್ಯನೆ ಧುರದಲ್ಲಿ ತಾನೈ ||
ಝಾಡಿಸುವೆ ಕೈಗುಣಕೆ ತುರಗವ |
ರೂಡಿ ಸಹ ಒಪ್ಪಿಸುವೆ ಕಪ್ಪವ |
ದೂಡಿದೆನು ಕ್ಷಮಿಸೆನ್ನ ನೀನೆಂ |
ದಾಡಿಸುವೆ ಬಾಯಿಂದ ಖೂಳನ || ಲಾಲಿಸೈ || 1 ||

ಬಲವ ನುಗ್ಗರಿವೆವು ವಿಲಾಸದಿ ಚಿಂತೆ ಬೇಡೈ | ಭಟರೊಳು |
ಕಲಹ ಬೇಡೆಂದೆನುತ ಕುನ್ನಿಯ ದಿಟದಿ ನೋಡೈ | ಎಮ್ಮಯ |
ಬಲುಹುಗಳನವನರಿಯನೀಗಲೆ ತೋರ್ಪೆ ನಾವೈ ||
ಛಲವ ಪರಿಕಿಸಿ ರಣದೊಳಾತನ |
ತಲೆಯನೀಕ್ಷಣ ಕಡಿದು ಮಾರಿಯ |
ಬಳಗಕುಣಲಿಕ್ಕುವೆವು ತೋಷದಿ |
ತಳುವದೀಯಪ್ಪಣೆ ರಮೇಶನೆ || 2 || 109 ||

**ವಾರ್ಧಕ**
ಅವನೀಶ ಲಾಲಿಸೀಪರಿ ಪರಾಕ್ರಮಿಗಳಿಂ |
ಬವರ ಸಂತಯಿಸಿ ನಿಜಸೇನೆ ಹಂಸಾಕೃತಿಯೊಳ್ |
ಹವಣಿಸುತ ಕೊರಳೊಳನುಸಾಲ್ವನಂ ಕಂಗಳೊಳ್ ನೀಲಹಂಸಧ್ವಜರನು ||
ತವಕದಿಂದುಭಯಪಕ್ಷಕೆ ಕಾಮನನಿರುದ್ಧ |
ನವಘಟಿಪ ಭೋಜ ಸಾತ್ಯಕಿಗಳಂ ಪಾದದೊಳೆ |
ಸೆವ ಹಿಂಗರಿಗೆ ಮೇಘವರ್ಣ ಯವನಾಶ್ವನಂ ವ್ಯೂಹಚಂಚುಸ್ಥಾನಕೆ || 1 || 110 ||

**ಭಾಮಿನಿ**
ನಿಲಿಸಿ ಫಲುಗುಣಿ ಕರ್ಣಜರ ಮಿ |
ಕ್ಕುಳಿದ ಪಡೆಯಂಘವಣೆ ಗೆಯ್ಯುತ |
ವಿಲಯಮೃಡನಂತರ್ಜುನನ ನೆಲೆಗೊಳಿಸಿ ಹೃದಯದಲಿ ||
ಬಳಿಕ ಮುರಹರ ಪಾಂಚಜನ್ಯವ |
ಮೊಳಗುತಿರೆ ತಾಮ್ರಧ್ವಜಾಖ್ಯನು |
ಅಳುಕದತಿ ಧೈರ್ಯದಲಿ ಮತ್ತಾ ಹರಿಯೊಳಿಂತೆಂದ || 1 || 111 ||

**ನಾದನಾಮಕ್ರಿಯೆ - ಅಷ್ಟ**
ಗೋಪಾಲ ಭುಜಬಲೋದ್ಧಾರನೆ | ನೀನು |
ಆ ಪಾಂಡವರ ಕಾಯ್ವ ಧೀರನೆ ||
ಈ ಪಾರ್ಥನಶ್ವ ಕಟ್ಟಿಸಿದೆನು | ಇಕ್ಕೊ |
ಭೂಪರಾದರೆ ಕಟ್ಟಬಲ್ಲೆಯವನು || 1 ||

ಬಲುಹುಳ್ಳ ಭಟನಾದರೆನ್ನನು | ಕಾದಿ |
ಗೆಲಿದೆರಡಶ್ವಂಗಳೊಯ್ವನು ||
ಛಲವಿಲ್ಲದಿರೆ ಬಿಟ್ಟು ಹೋಗಲಿ | ಇಂದು |
ಕುಲಜರಾದರೆ ಎನ್ನೊಳ್ ಸೆಣಸಲಿ || 2 ||

ವಾಂಛೆಯುಳ್ಳವನೆ ಕಿರೀಟಿಯ | ಬೇಗ |
ನಾಂಚಲಿಸದೆ ಶಾರ್ಙ್ಗ ಪಿಡಿಯಯ್ಯ ||
ನೀಂ ಚಕ್ರಮಂ ಬೇಗ ತುಡುಕೆಂದು | ವತ್ಸ |
ಲಾಂಛನ ಸಮ್ಮುಖಿಕಯ್ತಂದು || 3 ||

ಭುಗಿಲೆಂದು ಮಂತ್ರಿಸಿ ಶರಗಳ | ಬಿಡೆ |
ಜಗದೀಶ ಮುಂತಾದ ಬಲರೆಲ್ಲ ||
ತಗಲಿ ರೋಷಾರೂಢರಾಗುತ | ಕಂಡು |
ಖಗರೂಢ ಭಾಪೆಂದು ಪೊಗಳುತ್ತ || 4 || 115 ||

**ಭಾಮಿನಿ**
ಪಗೆಯವನು ಬಾಣವನು ಸುರಿಯಲು |
ಖಗತುರಂಗನು ಮೆಚ್ಚಲೀಕ್ಷಿಸಿ |
ಭುಗಿಲೆನುತ ಸ್ಮರನಣುಗನೆದ್ದಾ ಧನುವ ಝೇಂಕರಿಸಿ ||
ಮುಗಿಸುವೆನು ತಾಮ್ರಧ್ವಜಾಖ್ಯನ |
ತೆಗೆಸುವೆನು ಬಲವೆಲ್ಲ ಯಮನಲಿ |
ಬಿಗುಹ ನಿಲಿಸುವೆನೆನುತ ಶರಗಳ ಸುರಿವುತಯ್ತಂದ || 1 || 116 ||

**ಅಷ್ಟಪಾದ ಮಾರವಿ – ಏಕ**
ಕಾಮನ ಸುತನತಿ | ಕಾಮಿನಿ ಕಾಳಗ |
ಕಾಮಹರನವೋಲ್ | ಕಾಮುಕನಾಗುತ |
ತಾಮಸದಲಿ ಪರ | ರಾ ಮಹಬಲವ ನಿ |
ರ್ನಾಮವ ಗೆಯ್ದನು | ದ್ದಾಮನುನ್ನತಿಯ || ಕೇಳ್ಳೈ ಭೂಪ || 1 ||

ಈತೆರದೊಳು ಭಟ | ಚಾತುರಂಗದ ಬಲ |
ಘಾಸಿಸುತಯ್ತರೆ | ತಾ ತಿಳಿದಾಕ್ಷಣ |
ಖಾತಿಗಿದಿರು ಬರ | ಲಾ ತಾಮ್ರಧ್ವಜ |
ನಾ ತೇರ್ಗಡಿವುತ | ತಾ ತವಕದಲಿ || ಕೇಳ್ಳೈ ಭೂಪ || 2 ||

ಬಾಳೆಯ ವನ ಶುಂ | ಡಾಲ ಪೊಕ್ಕಂದದಿ |
ಸೀಳಿ ಗಜಾಶ್ವದ | ಸಾಲನು ಕೆಡಹಿ ಕಾ |
ಲಾಳುಗಳೆಲ್ಲವ | ಕಾಲನ ನಗರಿಗೆ |
ಬೀಳುಗೊಡುವ ನಿ | ಸ್ಸಾಳದ ಬಲವ || ಕೇಳ್ಳೈ ಭೂಪ || 3 || 119 ||

**ವಾರ್ಧಕ**
ರಣದೊಳನಿರುದ್ಧನಾಟೋಪಮಂ ಚಾಪಮಂ |
ಕಣೆಗಳಂ ತೆಗೆದೆಸೆಲ್ ಕರಿಗಳಂ ಹರಿಗಳಂ |
ಮಣಿಮಯ ರಥಂಗಳಂ ಕಾಲಾಳ ಮೇಲಾಳ ಸಂದಣಿಯ ಮಂದಿಗಳನು ||
ಹಣಿದವಾಡಿದನಹಿತ ಜಲದೊಳಗೆ ನೆಲದೊಳಗೆ |
ಹೆಣನ ಮೆದೆಗೆಡೆಯಲಕ್ಷೋಹಿಣಿಯ ವಾಹಿನಿಯ |
ಗಣನೆ ಮೂರಳಿದುದೊಂದೇಕ್ಷಣಕೆ ವೀಕ್ಷಣಕೆ ಸಲೆ ಭಯಂಕರಮಾಗಲು || 1 || 120 ||

**ಕಂದ**
ಅನಿರುದ್ಧನು ಈ ಪರಿ ಬಲ |
ದಣಿಸುವುದೀಕ್ಷಿಸಿ ಬೇಗದಿ ರಥವೇರುತ್ತಂ ||
ಧನುವಂ ಕೊಂಡು ಶಿಖಿಧ್ವಜ |
ನಣುಗನು ಭೋರ್ಗರೆವುತ ಭರದಿಂದಿದಿರಾದಂ || 1 || 121 ||

**ಶಂಕರಾಭರಣ - ಮಟ್ಟೆ**
ಆರೊ ನಿನ್ನ ಶೌರ್ಯವೀಗ | ತೋರದೆಮ್ಮ ಕೂಡೆ ಬಲದಿ |
ಬೀರಲಧಿಕನೆಂಬರೇನು | ಪೋರ ನಿನ್ನಯ ||
ಚೋರತನವ ನಿಲಿಸಿ ಹೆ | ಮ್ಮಾರಿಗುಣಿಸಿ ಪಡೆಯು ಸಹಿತ |
ಸೇರಿಸುವೆನು ಜವನಲೆನುತ | ತೂರೆ ಬಾಣವ || 1 ||

ಪರಿಹರಿಸುತನೆಂದನೆಲವೊ | ದುರುಳತನವ ಬಿಟ್ಟು ಬೇಗ |
ತುರಗವನ್ನೆ ಕೊಟ್ಟು ನರನ | ಚರಣ ಸೇರಿಕೊ ||
ಹರಣಮಾತ್ರದಲ್ಲಿ ಜೀವಿ | ಸಿರುವಡಾಸೆಯುಳ್ಳಡೀಗ |
ಹರಿಯ ಮೊಮ್ಮನಹೆನು ಎನ್ನ | ಪರಿಕಿಸೆನುತಲಿ || 2 ||

ಬಾಣವೆಸೆಯೆ ತರಿಯುತೆಂದ | ಬಾಣ ತನುಜೆಗಾಗಿ ನಿನ್ನ |
ಪ್ರಾಣ ಸಲಹಿ ಬಿಟ್ಟನೆನುತ ತ್ರಾಣವೆನ್ನಲಿ ||
ಕಾಣಿಸಿದೆ ಕೈಗುಣವಿದಲ್ಲ | ಗೋಣ ತರಿಯದುಳಿಸೆನೆಂದು |
ಸಾಣೆಯಲಗನೆಸೆದ ಪಂಚ | ಬಾಣನಾತ್ಮಜ || 3 ||

ಖಂಡಿಸುತ್ತ ಮರಳಿ ಯೆಸೆಯೆ | ತುಂಡಿಸುತಲೆ ತಾಮ್ರಕೇತು |
ಪುಂಡರೀಕನಯನಪೌತ್ರ | ಲಂಡನೆನುತಲೆ ||
ಕಂಡು ಬಿಟ್ಟರಿನಿತು ನಿನಗೆ | ಭಂಡ ನೋಡೆನುತ್ತಲಿಡೆ ಭೂ |
ಮಂಡಲಕ್ಕೆ ಬಿದ್ದು ಮೂರ್ಛೆ | ಗೊಂಡ ಸ್ಮರಜನು || 4 || 125 ||

**ಭಾಮಿನಿ**
ಜಲಜಶರನಾತ್ಮಜನು ಮೂರ್ಛೆಯ |
ತಳೆದು ಭೂತಲಕೊರಗಲೀಕ್ಷಿಸಿ |
ಘಳಿಲನೆದ್ದಾ ಶಂಬರಾರಿಯು ಭುಜವನೊಡೆಹೊಯ್ದು ||
ಕಳಕಳಿಸುತಬ್ಬರದಿ ಯುದ್ಧಕೆ |
ಮಲೆತು ರಿಪುಭಟನಂಗದಲಿ ಶರ |
ಮಳೆಯ ಸುರಿಸುತಲೆಂದ ಪುರುಷೋತ್ತಮನ ನಂದನನು || 1 || 126 ||

**ಘಂಟಾರವ - ಅಷ್ಟ**
ನಿಲ್ಲು ನಿಲ್ಲೆಲೊ ಘಡ ತಾಮ್ರಧ್ವಜ ನಿನ್ನ |
ಜಲ್ಲಿಗಳ ತೋರೆನುತ ಕೂರ್ಗಣೆ |
ಯಲ್ಲಿ ಮುಸುಕಿದ ಮನ್ಮಥ || 1 ||

ಅಶ್ವಮೇಧದ ತುರಗಂಗಳೆರಡನು |
ವಿಶ್ವನಾಥನಿಗಿತ್ತು ಮಣಿದರೆ |
ಶಾಶ್ವತದಿ ಸಲೆ ರಕ್ಷಿಪ || 2 ||

ಎಂಬ ಮಾತನು ಕೇಳ್ದೆಂದನೆಲೊ ನೀನು |
ಶಂಬರನ ಪಾಕಾಂಗನೆಯ ವಲಿ |
ದೆಂಬ ಪೌರುಷ ತೋರ್ಪೆಯ || 3 ||

ಸಮರದಂದವನರಿಯೆ ನೀ ಸತಿಯರ |
ಮಮತೆಯಲಿ ಮೋಹಿಸುವೆಯೆನ್ನುತ |
ಲಮಿತ ಶರಗಳ ಸುರಿಯಲು || 4 ||

ಕಡಿದು ಪೇಳಿದ ಹುಡುಗನೊಳ್ ರಣದಲಿ |
ಸಡಗರಿಸಿದೆಂದೆಂಬ ಸತ್ತ್ವವ |
ನಡೆಯದೆಂದೆನುತೆಚ್ಚನು || 5 ||

ಬಿಟ್ಟ ಬಾಣವ ತರಿದು ಮಂತ್ರಾಸ್ತ್ರವ |
ಸಿಟ್ಟಿನಿಂದೆಸೆಯಲ್ಕೆ ಮಾರನು |
ಸೃಷ್ಟಿಗೊರಗಿದ ಮೌನದಿ || 6 || 132 ||

**ಆರ್ಯಸವಾಯ್ - ಏಕ**
ಯುದ್ಧದಿ ಕಾಮನು ಮೂರ್ಛೆಯೊಳವನಿಗೆ |
ಬಿದ್ದುದನೀಕ್ಷಿಸುತಾ ಕ್ಷಣದೊಳ್ ||
ಉದ್ಧತಶೌರ್ಯದೊಳನುಸಾಲ್ವಾಸುರ |
ಗದ್ದುಗೆ ಹೊಡೆದಯಿದ್ದದನಾಗಳ್ || 1 || 133 ||

**ಪಂತುವರಾಳಿ - ಮಟ್ಟೆ**

ದನುಜಧೀಶ ನಡೆದ ಸಮರಕೆ | ಪೇಳ್ವೆ ಕೇಳು |
ದನುಜಧೀಶ ನಡೆದ ಸಮರಕೆ || ಪ ||
ಏನನೆಂಬೆ ಘೋರದನುಜ | ತಾನೆ ಭುಜವ ಹೊಯ್ದು ಸಮರ |
ಕಾನಲಯ್ದಿ ಮೀಸೆಗಡಿದು | ಸೇನೆ ಸವರುವಂತೆ ರಿಪುವ |
ತಾನು ಸವರುತಯ್ದಿ ಮುಂದಕೆ || ನಡೆಯೆ ಕಂಡು |
ಮಾನನಿಧಿಗಳಂಜಿ ಪಿಂದಕೆ | ಸರಿಯುತಿರುಲು |
ದಾನವೇಂದ್ರ ಮೆರೆದನಿರಿತಕೆ | ಪೇಳ್ವೆ ಕೇಳು ||
ದನುಜಧೀಶ ನಡೆದ ಸಮರಕೆ || 1 ||

ಚಾರು ಕುರಿಯ ಬಳಗದಲ್ಲಿ | ಮಾರಿ ಬಂದು ಬಿದ್ದ ತೆರದಿ |
ಭೂರಿ ಭೂತದಂತೆ ಖಳನು | ಕೋರೆದಾಡೆಗಳನು ಬಿಟ್ಟು |
ಘೋರಿಸುವುದ ಕಾಣುತುಗ್ರದಿ || ತಾಮ್ರಕೇತು |
ಭೋರನಿದಿರು ರಥವ ಬೇಗದಿ | ಚಾಚುತೆಂದ |
ಮಾರಹರನಂತಧಿಕ ರೋಷದಿ | ಪೇಳ್ವೆ ಕೇಳು ||
ದನುಜಧೀಶ ನಡೆದ ಸಮರಕೆ || 2 ||

ಎಂದು ಶರಗಳೆಸೆಯೆ ದೈತ್ಯ | ನಂದದಿಂದ ನಡುವೆ ತರಿದು |
ಮುಂದುವರಿದು ಭಟನಿಗಸ್ತ್ರ | ದಿಂದ ಮುಸುಕಲೆಲ್ಲ ಕಡಿಯು |
ತೆಂದ ವೀರ ರೋಷದಿಂದಲಿ || ಶಸ್ತ್ರತತಿಗ |
ಳಿಂದ ಖಳನ ಬಳಲಿಸುತ್ತಲಿ | ಕೋಲ ಕರೆದು |
ಮಂದಮತಿಯೆ ಪೋಗೆನುತ್ತಲಿ | ಪೇಳ್ವೆ ಕೇಳು ||
ದನುಜಧೀಶ ನಡೆದ ಸಮರಕೆ || 3 ||

ಹೊಡೆಯಲಿನಿತು ಶರಗಳೆಲ್ಲ | ಕಡಿದು ದಿತಿಜರೇಂದ್ರ ಮರಳಿ |
ತೊಡಲು ಬಾಣವೆಲ್ಲ ಪಥದಿ | ಬಿಡದೆ ಖಂಡಿಸುತ್ತಲವನ |
ಒಡಲೊಳಂಬ ಹೂಡೆ ದಡಿಗನು || ಹಿಮ್ಮೆಟ್ಟುತಾಗ |
ನಡೆದು ಸೋತು ಪುಣ್ಯ ಜನಪನು | ತಡೆಯದಾಗ |
ಒಡನೆ ತನ್ನ ಪಡೆಯ ಪೊಕ್ಕನು | ಪೇಳ್ವೆ ಕೇಳು ||
ದನುಜಧೀಶ ನಡೆದ ಸಮರಕೆ || 4 || 137 ||

**ಭಾಮಿನಿ (ಅರ್ಧ)**

ಮಲೆತು ಗರ್ಜಿಸಿ ನಿಲಲು ಸುಭಟಾ |
ವಳಿ ನಡುಗಲೀಕ್ಷಿಸಿ ಶಿಖಿಧ್ವಜ |
ವಿಲಯರುದ್ರನೆನಲ್ಕೆ ಧನು ಝೇವಡಿಸುತಿದಿರಾದ || 1 || 138 ||

**ಶಂಕರಾಭರಣ - ಮಟ್ಟೆ**

ಎಲವೊ ಖಳಲಲಾಮ ನಿನ್ನ | ಬಲುಹನೆಲ್ಲ ಬಲ್ಲೆ ನಾನು |
ಕಲಹದೊಳಗೆ ಕರ್ಣತನುಜ | ನಲಗ ಗಬ್ಬದೆ ||
ಕೊಳುಗುಳಿತ್ತ ಸಾಲ್ವನನುಜ | ಬಲಸಮರ್ಥನಹನೆನುತ್ತ |
ಲಲಿಸುದೆನ್ನ ಘನಮಹಾಸ್ತ್ರ | ಗಳು ರಣಾಗ್ರದಿ || 1 ||

ಹುಲು ಶರಂಗಳಿಂದ ನಿನ್ನ | ಗೆಲಲಿದೆನುತ ತಾಮ್ರಕೇತು |
ಚಲಿಸಲಾಗ ದನುಜನು | ಮ್ಮಳಿಸುತುಗ್ರದಿ ||
ಘಳಿಲನೆಚ್ಚು ತರಿದು ಪೇಳ್ದ | ನೆಲವೊ ಮೂಢ ಕೃಷ್ಣಭಕ್ತ |
ರಳುಕಿಸಿತ್ತೆನಲ್ಲದೆನ್ನ | ಬಲುಭುಜಂಗಳ || 2 ||

ಸತ್ತ್ವಕಿದಿರೆ ಲೋಕಮೂರೊ | ಳಿತ್ತು ಸಮರ ಗೆಲುವ ಭಟರು |
ಮತ್ತನಾಗಿ ಕೆಡದಿರಿನ್ನು | ಚಿತ್ತಜಯ್ಯನ ||
ಉತ್ತಮಾಂಘ್ರಿಗೆರಡು ಹಯಗ | ಳಿತ್ತು ಪಾರ್ಥನೊಡನೆ ಸಖ್ಯ |
ವೆತ್ತಡಾತ ಕಾಯ್ವ ನಿನ್ನ | ಭ್ರಾತೃಭಾವದಿ || 3 ||

ಎನುತ ಪೊಡೆದ ಕಣೆಗಳ್ ತರಿದು | ಕನಲುತೆಂದನೆಲವೊ ಮನದಿ |
ಘನ ದುರಾತ್ಮನಿವನೆನುತ್ತ | ನೆನೆದೆಯಲ್ಲದೆ ||
ಗುಣವ ಗ್ರಹಿಸದಾದೆ ಮರುಳೆ | ವನಜನಾಭನಡಿಯ ಭಾ |
ವನೆಗಳಿಂದ ಕಟ್ಟಿ ಬ | ಚ್ಚಿಟ್ಟಹನು ಎನುತಲಿ || 4 ||

ಜನವದರಿಯಲೀಗ ಕೇಳು | ಜನಸಮೂಹ ಸಹಿತ ನಿನ್ನ |
ಘನರಣಾಗ್ರದೊಳಗೆ ಕೆಡಹಿ | ವನಜಪೀಠನ ||
ವಿನುತನವನ ಪ್ರಾಣ ಭಜಕ | ನೆನಿಸುವನ ಸಮೇತ ಕಟ್ಟಿ |
ಕಣನೊಳಿಳುಹಿ ಹರಿಯನೊಯ್ವೆ | ಬಣಗೆನಿನಿತನು || 5 ||

ಹವಣಿಸದಡೆ ಭಕ್ತನಹನೆ | ಭುವನಧಾರಧರಗೆನುತ್ತ |
ತವಕಿಸಿದ ಮಹಾಸ್ತ್ರ ಶಸ್ತ್ರ | ಪ್ರವರನುರುಬೆಗೆ ||
ಭವಣೆಗೊಳುತ ಮತ್ತೆ ಈರ್ವ | ರವಗಡಿಸುವ ವಿಶಿಖಗಳಲಿ |
ಬವರ ಸಮವೆನಲ್ಕೆ ಕಾದ | ಲವರು ಚಳಕದಿ || 6 || 144 ||

**ಕಂದ**
ಇಂತಾ ಖಳನುಂ ಸೆಣಸುವ |
ಅಂತರವರಿದತಿ ರೋಷೋದ್ರೇಕದೊಳಾಗಳ್ ||
ಮಂತರಿಸುತ ಮಹಾಸ್ತ್ರವ |
ನುಂ ತೆಗೆದೇರಿಸುತ ನುಡಿದಂ ನೃಪಾಲನೊಳ್ || 1 || 145 ||

**ಭೈರವಿ - ಏಕ**
ನಿಲ್ಲೆಲೊ ಪೂರ್ವಾಮರನೆ | ಬಲು |
ಜಲ್ಲಿಸಿದೆಯೊ ಎನ್ನೊಡನೆ ||
ಬಲ್ಲಿದನಾದೆಯೊ ನೀನು | ಎನು |
ತಲ್ಲೇರಿಸಿದಸ್ತ್ರವನು || 1 ||

ಬಿಡಲಾ ಖಳ ಬೊಬ್ಬಿರಿದು | ಕಿಡಿ |
ಯಿಡುತೆಂದನು ಕಡು ಮುಳಿದು ||
ಬಡ ತರಳನು ನೀನೆನುತ | ಕೈ |
ಸಡಲಿಸಿದರೆ ನಿನಗಿನಿತ || 2 ||

ಪೌರುಷವಾಯಿತೆ ಎಂದು | ಘನ |
ಶೌರ್ಯದಿ ಕಾರ್ಮುಕಕಂದು ||
ಸೌರಿಸಿ ಬಾಣವ ಧುರದಿ |ಬಹ|
ಗೌರದ ಶರಸಮ್ಮುಖದಿ || 3 ||

ನಿಂತಿರಲಾ ಶಿಖಿಧ್ವಜನು | ಪೊಡೆ |
ವಂತೆ ಮಹಾಕಣೆಗಳನು ||
ಪಿಂತಿರುಗಿಸಲಳವಡದೆ | ಖಳ |
ಚಿಂತಿಸಿ ಮರಳಿದ ನಿಲದೆ || 4 || 149 ||

**ಭಾಮಿನಿ**
ಮಕರಕೇತನಿರುದ್ಧ ಸಾಲ್ವ |
ದ್ಯಖಿಳ ವೀರರ ಗೆದ್ದು ಭುಜಬಲ |
ಪ್ರಕಟಿಸುತ ಕೃಷ್ಣಾರ್ಜುನರೊಳವಗಡಿಸಿ ಕೋಲ್ಗರೆದು ||
ಶಕುತಿಯಿಂ ಮುಂದಯ್ದಲೀಕ್ಷಿಸಿ |
ಮುಖಚತುಷ್ಟಯ ಪ್ರಳಯಶಿವನಂ |
ತಖಿಳ ಬಲನಡ್ಡಯ್ಸಿ ತೇರ್ಗಡಿದೆಂದ ವೃಷಕೇತು || 1 || 150 ||

**ಭೈರವಿ - ಅಷ್ಟ**
ಎಲವೊ ತಾಮ್ರಧ್ವಜನೆ | ಎಮ್ಮಶ್ವವ |
ಇಳೆಯೊಳ್ ಕಟ್ಟುವರ ಕಾಣೆ ||
ಛಲವೇಕೆ ಹಯ ಬಿಟ್ಟು ಜಲಜಾಕ್ಷಗೆರಗಿ ನೀ |
ಸಲಹಿಕೊ ಪ್ರಾಣವನು || 1 ||

ಎನುತೆಚ್ಚ ಶರಗಳನು | ಕತ್ತರಿಸುತ್ತ |
ಧನುವ ಝೇಂಕರಿಸಿದನು ||
ವನಜಾಕ್ಷನಡಿಯ ಮೆಚ್ಚಿಸುವೆನೀಗೆನ್ನ ಕೈ |
ಗುಣ ನೋಡೆಂದೆನುತೆಚ್ಚನು || 2 ||

ಪರಿಹರಿಸುತಲೆಂದನು | ಸಂಗ್ರಾಮದೊಳ್ |
ಹರಿ ಧನಂಜಯರೊಳ್ ತಾನು ||
ಸರಿಸಮನಾಗಿ ಹೊಯ್ದಾಡುವ ಗರ್ವ ವಿ |
ಸ್ತರಿಸೆನ್ನೊಳೆನುತೆಚ್ಚನು || 3 ||

ಸೂತಜನಾತ್ಮಜನು | ಭಾಪುರೆ ವೃಷ |
ಕೇತುವೆಂಬವನೆ ನೀನು ||
ತಾತನ ಕೊಂದವ ನಿನಗೆನ್ನ ಕೈಯಲಿ |
ಘಾತಿಸಲ್ ನೋಳ್ಪ ಪಾರ್ಥ || 4 ||

ಎಂದೆಚ್ಚ ಶರಘಾತದಿ | ಕರ್ಣಜ ಮೂರ್ಛೆ |
ಯಿಂದೊರಗಲು ಮುದದಿ ||
ಮುಂದರಿದಾ ತಾಮ್ರಧ್ವಜನತಿ ವಿಕ್ರಮ |
ದಿಂದೊಕ್ಕ ಬಲದೊಳಗೆ || 5 || 155 ||

**ವಾರ್ಧಕ**
ಅನಿರುದ್ಧನಂ ಗೆಲ್ದು ವೃಷಕೇತುವಂ ಕೆಡಹಿ |
ಅನುಸಾಲ್ವನಿದಿರಾದಡಾತನ ಪರಾಕ್ರಮವ |
ನನುವರದೊಳುರೆ ಮುರಿದು ಕೃತವರ್ಮ ಸಾಂಬ ಪ್ರದ್ಯುಮ್ನರಂ ನೆರೆ ಸೋಲಿಸಿ ||
ಅನುಪಮಬಲಂ ಬಭ್ರುವಾಹನಂ ಕಾದಲವ |
ನನುವನೊಪ್ಪಂಗೆಡಿಸಿ ಹಂಸಧ್ವಜನ ಜಯವ |
ನನುಕರಿಸಿ ಯವ್ವನಾಶ್ವಾಸಿತಧ್ವಜರನುಂ ತಗಲ್ದವಂ ಬೊಬ್ಬಿರಿದನು || 1 || 156 ||

**ಕಂದ**
ಬಲಮೀಪರಿಯಿಂದಂ ಗೆಲಿ |
ದಲಸದೆ ಮುಂದೈತಹ ವೈರಿಯ ಕಾಣುತ್ತಂ ||
ಬಲವೈರಿಯ ನಂದನ ತಾ |
ನಳುಕದೆ ರೋಷದಿ ಗರ್ಜಿಸಿ ಧುರಕನುವಾದಂ || 1 || 157 ||

**ಸುರುಟಿ - ಮಟ್ಟೆ**
ಗಧಗಧಿಸುತ ಪಾರ್ಥ | ಕೋಪದಿ ಕಿಡಿಯಿಡುತ |
ಗಧಗಧಿಸುತ ಪಾರ್ಥ || ಪ ||
ಘಳಿಘಳಿಗಾಬಲ ಬೆದರಲು |
ಕಳವಳ ಬೇಡೆಂದು ||
ಮಲತರಿ ಭಟನನು ಕಾಣುತ |
ಕಳವಳಿಸುತಲಂದು || 1 ||

ವನಜಾಕ್ಷಗೆ ವಂದಿಸಿ ಮೇಲ್ |
ಹನುಮಗೆ ಕೈಮುಗಿದು ||
ಮನದೊಳ್ ಗುರುವಡಿ ಧ್ಯಾನಿಸಿ |
ಘನಹಯಗಳ ಮಣಿದು || 2 ||

ರಥವೇರುತ್ತಹಂಕಾರದಿ |
ಪ್ರಥುಳಬಲಾನ್ವಿತನು ||
ಖತಿಗೆಯ್ಯುತ ಧನುವನು ಝೇಂ |
ಕೃತಿಗೆಯ್ಸಿದನವನು || 3 || 160 ||

**ಭಾಮಿನಿ**
ಘೋರತರ ಶಸ್ತ್ರಾಸ್ತ್ರ ಧನುವಿಂ |
ಗೇರಿಸುತ ಕಲಿಪಾರ್ಥ ರೋಷದಿ |
ಭೋರನೆಸೆಯುತಲಯ್ದಿ ರಥವನು ಚಾಚಿ ಸಮ್ಮುಖಕೆ ||
ವೀರ ತಾಮ್ರಧ್ವಜನು ಬಿಲು ಝೇಂ |
ಕಾರವನು ಗೆಯ್ಯುತ್ತ ಸುರಪಕು |
ಮಾರನನು ಕಾಣುತ್ತ ನುಡಿಸಿದನಧಿಕ ಶೌರ್ಯದಲಿ || 1 || 161 ||

**ಮಾರವಿ - ಏಕ**
ಲೇಸಾಯ್ತರ್ಜುನ ಗೋತ್ರಹತಿಯ ಭಯ |
ವಾಸುದೇವನು ಇರಲು ||
ತಾ ಸೋತುದೆ ಮಖವೆಸಗುತಲರ್ಥಗ |
ಳಾಸೆಯಿಂದ್ವಯಗೊಂಡು || 1 ||

ಧರಣಿಪರೆಲ್ಲರ ನೀ ಗೆದ್ದಿಯ ಘಡ |
ಮರುಳು ಧನಂಜಯನೆ ||
ಹರಿಯ ಕರುಣವಿರೆ ದ್ರವ್ಯ ಬೇಕಾದುದ |
ನರುಪೆನಗೀಕ್ಷಣದಿ || 2 ||

ಎನುತೆಚ್ಚಾಬ್ದಸ್ತ್ರವ ತರಿಯುತಲಾಕ್ಷಣ |
ಘನಶರಗಳ ಪಾರ್ಥ ||
ಮನದಣಿವಂತೆಸೆಯಲ್ ಖಂಡಿಸಲವ |
ನನು ಕಾಣುತಲೆಂದ || 3 ||

ಸತ್ಯ ಶುಚಿತ್ವ ಸ್ವಧರ್ಮಗಳಲ್ಲದೆ |
ಧೂರ್ತಪಾಪಾತ್ಮನಿಗೆ ||
ನಿತ್ಯದಿ ಹಯಕ್ರತು ರಚಿಸಿ ಪರಾಪರ |
ಮೂರ್ತಿಯು ದೊರಕುವುದೆ || 4 ||

ಜಲಜಾಕ್ಷನನೆಲೆ ನೀನೇನರಿತಿಹೆ |
ಫಲಮಾತ್ರದಿ ತೋರ್ಪೆ ||
ತಿಳಿಯೆಂದಿಡೆ ರಥ ಸಾರಥಿ ಸಹಿತಲೆ |
ಇಳೆಗೆಡೆದುದು ಭರದಿ || 5 || 166 ||

**ಕಂದ**
ಸಾಸಿರ ರಥಮೀತೆರದಿಂ |
ಘಾತಿಸಲರಿಭಟನೀಕ್ಷಿಸುತತಿ ವೇಗದೊಳುಂ ||
ಬೇಸರಿಸದೆ ಪೊಸ ರಥದಿಂ |
ವಾಸವಿಯಂ ಕಣೆಯೊಳ್ ಮುಸುಕುತಲಿಂತೆಂದಂ || 1 || 167 ||

**ಭೈರವಿ - ಏಕ**
ವಾನರಧ್ವಜ ನೀ ಕೇಳು | ಈ |
ಬಾಣಗಳೆಸೆವೆತ್ವಗಳು ||
ಕ್ಷೋಣಿಯೊಳಾರ್ ಕಲಿಸಿದನು | ಎಂ |
ದಾ ನರಗೆಚ್ಚಾಸ್ತ್ರವನು || 1 ||

ತಾಳಿಕೊಳದೆ ಮೂರ್ಛೆಯಲಿ | ಬಿ |
ದ್ದೇಳುತಲತಿಧೈರ್ಯದಲಿ ||
ಜಾಳಿಸಿಬಿಟ್ಟಂಬಿನೊಳು | ಭಟ |
ನಾಳಿಬಿಲುದುರೆ ಧರೆಯೊಳು || 2 ||

ಕೋಪದಿ ಕೆಂಗಿಡಿಯಿಡುತ | ಪೊಸ |
ಚಾಪವ ತಾ ಕೈಗೊಳುತ ||
ಭಾಪೆನುತಲಿ ಫಲುಗುಣನ | ರಥ |
ತಾ ಪಿಂದೆಸೆಯಲ್ಕವನ || 3 ||

ಆಧರಿಸುತ ಮಲತರಿಯ | ಕಡು |
ಕ್ರೋಧದೊಳೆಚ್ಚ ಪಿಂಗಳಿಯ ||
ತೋದುತ ಶಕಟವ ನಭಕೆ | ನರ |
ನೈದಿಸಲವ ಭೂತಳಕೆ || 4 || 171 ||

**ವಾರ್ಧಕ**
ತಾ ತಳುವದೈದಿ ಪಾಂಡವಸೇನೆಯೊಳ್ಪ್ರಯುತ |
ಚಾತುರಂಗವನೈದೆ ಸಂಹರಿಸಿ ಪಾರ್ಥನಂ |
ಘಾತಿಸಿದನಡಿಗಡಿಗೆ ಹಳವಿಗೆಯ ಹನುಮನಂ ಪಲ್ಗಿರಿಸಿ ಹರಿಯನೆಚ್ಚು ||
ಸೂತವಾಜಿಗಳನೊಡನೊಡನೆ ಜವಗೆಡಿಸಿ ವಿ |
ಖ್ಯಾತ ಚಾಪದ ನಾರಿಯಂ ಕಡಿದು ಮೆರೆಯಲಾ |
ಧಾತ್ರಿಯ ಕರಾಗ್ರದೊಳಗೆಸೆವ ಧನು ಮುಕ್ಕಡಿಯ ಗೆಯ್ಯಲಾ ಕೌಂತೇಯನು || 1 || 172 ||

**ಭಾಮಿನಿ**
ಭೂಪ ಕೇಳ್ ಧನುವಳಿಯೆ ಪಾರ್ಥನಿ |
ಗಾ ಪ್ರತಾಪಾನ್ವಿತದ ಸ್ಯಂದನ |
ತಾಪಿಸುತ ಗಗನಾಂಗಣಕೆ ತೆಗೆದಪ್ಪಳಿಸಿ ನೆಲಕೆ ||
ಈ ಪರಿಯೊಳಿರುಳ್ಪಗಲು ದಿನವೇಳ್ |
ಕೋಪದಿಂ ಹಳಚುತ್ತ ಬಳಲುವ |
ನಾಪರಾಕ್ರಮಿಯರ್ಜುನನ ಬೋಳೈಸಿ ಹರಿ ನುಡಿದ || 1 || 173 ||

**ಶಂಕರಾಭರಣ - ಅಷ್ಟ**
ಕೇಳಯ್ಯ | ಗುಣಶೀಲ ಕಿರೀಟಿ ನೀ | ಕೇಳಯ್ಯ ||
ಕೇಳು ಭೂಪಾಲನ | ತೋಳಶೌರ್ಯವ ಗೌರೀ |
ಲೋಲನೈತರಲೊಮ್ಮೆ | ಸೋಲಿಪ ಸಮರದಿ || ಪ ||
ಅಳುಕನಲ್ಲಿವ ಧರ್ಮದೊಳಗೆ | ಕಾದ |
ಲಳವಲ್ಲವೈ ಧುರದೊಳಗೆ | ಭುಜ |
ಬಲದಿ ಕುಂದಿಲ್ಲೆಂದು ನಿನಗೆ | ಮುನ್ನ |
ತಿಳುಪಿಸಿದೆನು ಮೊದ | ಲುಳಿವುಪಾಯವು ಈಗ |
ತಳುವದೆಸಗದಿರೆ ಗೆಲಲರಿದಿವನಿಂದು || 1 ||

ಬೇರೆ ಬೇರೀರ್ವರು ರಥದಿ | ನಾ |
ವೇರಿಕೊಂಡಸ್ತ್ರವ ಮುದದಿ | ಹೆಚ್ಚು |
ಗಾರು ಗೆಡಿಸದಿರೆ ರಣದಿ | ನಮ್ಮ |
ಭಾರಿ ಕೈಚಳಕವ | ತೋರಿಸದಿರೆ ಮುಂದೆ |
ಕಾರಿಯವದು ತಾ ಕೈ | ಸೇರುವದರಿಯೆನು || 2 || 175 ||

**ಭಾಮಿನಿ**
ಧರಣಿಪತಿ ಕೇಳಿಂತು ಪಾರ್ಥನಿ |
ಗರುಹಿ ಹರಿ ಬೇರೊಂದು ಸ್ಯಂದನ |
ವಿರದೆ ತಾನಡರುತ್ತ ಶರಗಳ ಸುರಿಯಲಾಕ್ಷಣದಿ ||
ನರನು ಬಳಿಕೊಂದೆಸೆಯೊಳಡರುತ |
ಸರಳಮಳೆಗೆರೆಯಲ್ಕೆ ರಿಪುಭಟ |
ನರಿತುಭಯವೀರರುಗಳೆಚ್ಚಡೆ ಕಣಗಳನು ನಡುವೆ || 1 || 176 ||

**ಆರ್ಯಸವಾಯಿ – ಏಕ**
ಖಂಡಿಸಿ ಬೆದರದೆ ಮುಂದರಿವುತಲಾ |
ಪುಂಡರೀಕಾಕ್ಷನನೀಕ್ಷಿಸುತ ||
ಖಂಡಪರಶು ನಡವಂದದಿ ಖಾತಿಯ |
ಗೊಂಡೆಂದಾವೀರನು ನಗುತ || 1 || 177 ||

**ಸೌರಾಷ್ಟ್ರ – ತ್ರಿವುಡೆ**
ಭಳಿರೆ ಕೃಷ್ಣ ಶಭಾಸು ಮೆಚ್ಚಿದೆ |
ನಳುಕದೆನಗಿದಿರಾದೆ ಸಮರದಿ |
ತಳುವದೆಚ್ಚಾಸ್ತ್ರಗಳು ನೀ ಕೈ | ಚಳಕದಿಂದ || 1 ||

ಧರಣಿಪರು ಮನವಲಿದರಲ್ಲದೆ |
ಬರಡು ಪಾರ್ಥನ ಧುರಕೆ ಸೋಲ್ವರೆ |
ಬರಿದೆ ನೀ ಬೇರ್ಹಳಚೆ ಫಲುಗುಣ | ನಿರವ ರಣದಿ || 2 ||

ಈಸು ದಿನ ನೀ ಸಲಹಿ ಸುಮ್ಮನೆ |
ಗಾಸಿ ಮಾಡದೆ ನರನ ರಥದೊಳು |
ವಾಸವಾಗೆನೆ ಮೆಚ್ಚಿ ಮನದೊಳು | ವಾಸುದೇವ || 3 ||

ಬೇಗ ಪಾರ್ಥನ ರಥಕೆ ಬಂದ್ವಿಯ |
ವಾಘೆಯನು ಕೈಗೊಂಡು ಭಾಪೆನು |
ತಾಗ ಮುಸುಕಿದನವನ ಶಸ್ತ್ರ ಸ | ರಾಗದಿಂದ || 4 || 181 ||

**ವಾರ್ಧಕ**
ಹರಿನಂದನನ ದಿವ್ಯ ಹರಿಮಯ ವರೂಥಮಂ |
ಹರಿವೇಗದಿಂದೆಸೆವ ಹರಿಚತುಷ್ಟಯಗಳಂ |
ಹರಿಯನುಂ ಹಳವಿಗೆಯ ಹರಿಯನುಂ ಪಾರ್ಥ ನರಹರಿಯನುಂ ಧಾತುಗೆಡಿಸಿ ||
ಹರಿಬದಲಿ ವೀರರ ಪ್ರಹರಿಸಿ ತಾಮ್ರಧ್ವಜಂ |
ಹರಿನಾದಮಂ ಮಾಡೆ ಹರಿದಾಡುತಿರೆ ಕೂಡೆ |
ಹರಿಣಾಂಕಕುಲಜನ ವಿಹರಿಸಿದ ಬಾಣಮಂ ಹರಿಕಿರಣಮಡಗುವಂತೆ || 1 || 182 ||

**ಭಾಮಿನಿ**
ಮತ್ತೆ ಮುರಹರನಿಂಗೆ ಬಾಣವ |
ಹತ್ತರಿಂದಲೆ ಮುಸುಕಿ ಬಳಿಕರು |
ವತ್ತರಲಿ ಜಿಷ್ಣುವಿನ ಮೂರ್ಛೆಯಕೊಳಿಸಿ ಚೀತರಿಸಿ ||
ಒತ್ತಿ ಭಟನಂಗದೊಳು ಪೌರುಷ |
ವೆತ್ತು ತಾಮ್ರಧ್ವಜನು ಧನುವನು |
ಕತ್ತರಿಸಿ ರಥ ಸಾರಥಿಯ ಸಹನುಚ್ಚುನುರಿಗೆಯ್ದ || 1 || 183 ||

**ಪಂಚಾಗತಿ – ಮಟ್ಟೆ**
ತೇರ ಮುರಿಯಲಾಗ ಪ್ರಥುಳ | ವೀರಬಲದೊಳು |
ಚಾರು ರೋಷದಿಂದ ಕೆಂಡ | ಕಾರಿ ಭುಜಗಳು ||
ಬ್ಬೇರಿ ಧನುವ ಝೇಂಕರಿಸುತ | ಲಾರುಭಟೆಯೊಳು |
ಮಾರಹರನ ತೆರದೊಳೆಚ್ಚ | ನಸ್ತ್ರತತಿಗಳು || 1 ||

ತರಿಯಲನಿತರೊಳಗೆ ನರನ | ಬಳಿಗೆ ಬೇಗದಿ |
ಬರಲು ತಾಮ್ರಧ್ವಜನು ಕಂಡು | ಹರಿಯು ರೋಷದಿ ||
ಚರಣತಳದೊಳೊದೆಯೆ ಮುರಿದ | ಮರಗಳಂದದಿ |
ಧರಣಿಗುರುಳುತೆಚ್ಚ ಕರಿಯ | ನೇರಿ ತ್ವರಿತದಿ || 2 ||

ಕಣೆಯ ಸಂಕುಲಗಳು ಕರೆಯು | ತಿರಲು ಬೇಗದಿ |
ಗಣನೆಯಿಲ್ಲದನಿತು ನಡುವೆ | ಗೆಲುವುತುಗ್ರದಿ ||
ಅಣಕವಲ್ಲೆಂದೆಚ್ಚ ಪಾರ್ಥ | ನುರಗನಸ್ತ್ರವ |
ಕ್ಷಣದೊಳದರ ತರಿದ ಗರುಡ | ಶರದೊಳಂದವ || 3 ||

ಘೋರತರ ಕೃಶಾನುಶರ ಕಿ | ರೀಟಿ ಪೊಡೆಯಲು |
ವಾರುಣಾಸ್ತ್ರದಿಂದಲದರ | ಗೆಲಿದು ಭರದೊಳು ||
ಚಾರು ಪರ್ವತಾಸ್ತ್ರದಿಂದ | ಮೋದಲಾತನು |
ವೀರ ಕುಲಿಶ ಶರದಿ ಮಾಪು | ಗೆಯ್ಯುತದರನು || 4 ||

ಇನಿತು ಮಂತ್ರಶರ ಬೀಭತ್ಸು | ಕರೆಯಲಾತನು |
ಕಿನಿಸಿನಿಂದ ಗೆಲಿದು ಮೂಲ | ಬಲದಿ ನರನನು ||
ಎಣಿಕೆಯಿಂದ ತಾಳಿಕೊಳ್ಳ | ನುತ್ತಲೆಸೆಯಲು |
ಅನುವರದಲಿ ಬಿದ್ದ ಮೂರ್ಛೆ | ಯಿಂದ ಧರೆಯೊಳು || 5 || 188 ||

**ವಾರ್ಧಕ**
ಪೊಡವಿಗರ್ಜುನ ಮೂರ್ಛೆಯಿಂದೊರಗೆ ಬಲದೊಳಗೆ |
ಮಿಡುಕುಳ್ಳ ವೀರರೆಸುಗೆಗೆ ನಿಲ್ವರಿಲ್ಲದಿರೆ |
ಕಡುಗಲಿತ್ವದಿ ತಾಮ್ರಕೇತು ಮೆರೆಯಲು ಕಂಡು ಕಂಸಾರಿ ಕೋಪದಿಂದ ||
ತಡೆಗಡಿವೆನಿವನೆಂದು ಕೋಟಿ ರವಿರಶ್ಮಿಯಂ |
ಕಡು ಪ್ರಕಾಶಿಪ ಸುದರ್ಶನಮಿಡಲು ವೈರಿಭಟ |
ಪಡೆಯನಕ್ಷೋಹಿಣಿಯು ಧರೆಗೆಡದು ನಿಮಿಷದೊಳ್ ರಣಭಯಂಕರಮಾಗಲು || 1 || 189 ||

**ಕಂದ**
ಮಾರ್ಬಲಮಿಂತಳಿಯಲ್ ಕಂ |
ಡಾರ್ಭಟೆಯಿಂ ಶಿಖಿಕೇತನ ಸುತನತಿ ಭರದಿಂ ||
ಪೇರ್ಬಲಕಸ್ತ್ರವ ನಡೆಸು |
ತ್ತಾರ್ಭಟದಿಂದ ರಮಾಧವನೊಡನಿದಿರಾದಂ || 1 || 190 ||

**ಭೈರವಿ – ತ್ರಿವುಡೆ**
ಬಂದನಾಗ | ಸಮರಕೆ | ನಿಂದನಾಗ ||
ಬಂದನಾ ಶಿಖಿಕೇತುನಂದನ | ನಿಂದನತಿ ವಿಕ್ರಮದಲಿ ||
ನಂದಿವಾಹನನಂತೆ ಪಡೆ ಮಡಿ | ದಂದವನು ಕಾಣುತ್ತಲಿ ||
ನೊಂದು ಮನದಲಿ ಭುಗಿಲೆನುತ ಕ್ರೋ | ಧಂದವನು ಕಾಣುತ್ತಲಿ ||
ನಂದನಂದನಗಸ್ತ್ರ ಚಲಿಸುತ | ಲೆಂದನತಿ ಕಿನಿಸಿಂದ ಧುರದಲಿ ||
ಬಂದನಾಗ || 1 ||

ಯಾದವೇಂದ್ರನೆ ಕೇಳು ಮೆಚ್ಚಿದೆ | ನಾದಿಯೊಳು ತವ ಪುಣ್ಯವ ||
ಈ ಧನಂಜಯಗಿತ್ತು ಯೆನ್ನೊಳು | ಕಾದಲೇತಕೆ ಚಕ್ರವ ||
ಕ್ರೋಧದೊಳು ಪಡೆಗೆಚ್ಚು ಬರಿಗ | ಯ್ಯಾದೆ ಸಾಧಿಸಿ ವೈರವ ||
ಆದರಿಸು ತೊಡುಯೆನುತ ಶಸ್ತ್ರವ | ಮೋದುತಿರಲೀಕ್ಷಿಸಿದ ಮಾಧವ ||
ಬಂದನಾಗ || 2 ||

ಬೆರಗಿನಲಿ ನಿಂದಿರಲು ಬೇಗದಿ | ಹರಿಯ ಸನ್ನಿಧಿಗಯ್ದುತ ||
ಸಿರಿವರನ ಕರಕಮಲ ಒಂದೇ | ಕರದೊಳೆರಡನು ಪಿಡಿಯುತ ||
ಪರಮಪಾವನ ಪದಯುಗಂಗಳ | ಶಿರದೊಳದ ತಾ ಧರಿಸುತ ||
ನರನ ಬಳಿಗಯ್ತರುವುದೀಕ್ಷಿಸಿ | ಹರಿಯು ಪಾರ್ಥನಿಗೆಂದ ಬಳಲುತ ||
ಬಂದನಾಗ || 3 ||

ತೊಡು ಕಿರೀಟಿ ಮಹಾಸ್ತ್ರ ವೈರಿಗೆ | ಬಿಡಿಸಿಕೊಳು ತನಗೆನ್ನುತ ||
ಕಡಲಶಯನನು ಪೇಳೆ ವಾಸವಿ | ತಡೆಯದಂಬನು ಸೇದುತ ||
ಹೊಡೆವನಿತರೊಳ್ ಸವ್ಯಸಾಚಿಯ | ಕಡುಗಿ ಪಾದದಿ ಮೆಟ್ಟುತ ||
ಬಿಡದೆ ಕಕ್ಷದೊಳೌಕುತೀರ್ವರು | ಮಿಡುಕಲೀಯದೆ ಪೊಡವಿಗುರುಳುತ ||
ಬಂದನಾಗ || 4 || 194 ||

**ವಾರ್ಧಕ**
ಉದ್ದಂಡ ಭುಜಬಲದೊಳೋರ್ವನೋರ್ವನನೊತ್ತಿ |
ಬಿದ್ದರಿಳೆಯೊಳ್ ಮೂವರುಂ ನೊಂದು ಮೂರ್ಛೆಗೊಂ |
ಡಿರ್ದರದರೊಳ್ ಪಾರ್ಥ ಶೌರಿಗಳ್ ಬಳಿಕ ತಾಮ್ರಧ್ವಜಂ ಸತ್ತ್ವದಿಂದ ||
ಎದ್ದು ನೋಡಿದನಲ್ಲಿ ತನ್ನೊಡನೆ ಕಾಳಗಕೆ |
ಹೊದ್ದುವಧಟರನಾರನುಂ ಕಾಣದೆಲ್ಲರಂ |
ಗೆದ್ದೆರಡು ಕುದುರೆಯಂ ಕೊಂಡುಳಿದ ಪಡೆಸಹಿತ ತಿರುಗಿದಂ ವಹಿಲದಿಂದ || 1 || 195 ||

**ಭಾಮಿನಿ**
ಪೊಡವಿಪತಿ ಕೇಳ್ ಮೂರು ಲೋಕದ |
ಒಡೆಯ ಹರಿಪಾರ್ಥಾದಿ ವೀರರ |
ಪಡೆಯನೊಬ್ಬನೆ ಗೆಲಿದು ಬಹುದೀಕ್ಷಿಸುತ ಪುರಜನರು ||
ತಡೆಯದಾರತಿಗಳನು ಕೈಗೊಳು |
ತೊಡನೆ ತಾಮ್ರಧ್ವಜನ ಪರಿಗಳ |
ನಡುಗೆ ಭಯದಿಂ ತಾವೆ ತಮ್ಮೊಳು ನುಡಿದರಿಂತೆನುತ || 1 || 196 ||

**ಶಂಕರಾಭರಣ – ಏಕ**
ಅಕ್ಕ ನೀ ನೋಡಿದೆಯೇನೆ | ರಕ್ಕಸಾರಿ ಪಾರ್ಥರ ಹಯವ |
ಇಕ್ಕೆಲಕ್ಕೆ ಹೊಂಡುಬಹರು | ದಕ್ಕದವರನು ||
ಝಕ್ಕುಲಿಸಿ ತಾಮ್ರಧ್ವಜನು | ಮಿಕ್ಕುತವರ ರಣದಿ ಕೆಡಹಿ |
ಸಿಕ್ಕಿದ ರಥಾಶ್ವ ಕೊಂಡು | ಉಕ್ಕಿಬರುವುದ || 1 ||

ಮೆಚ್ಚುವನೆ ಪಿತನು ಮೊದಲೆ | ಅಚ್ಯುತನ ನೋಳ್ಪಾಸೆಯು |
ಹೆಚ್ಚಿ ಮಖವ ಮಾಡಿ ಹರಿಯ | ನರ್ಚಿಸುತ್ತಲಿ ||
ಸಚ್ಚಿತ್ತದಿ ದಾನಧರ್ಮ | ಮೆಚ್ಚಿಸುತ್ತ ಬುಧಜನರನು |
ಇಚ್ಛೆಯಿದ್ದಂತೆಸಗಿ ದೀಕ್ಷೆ | ಯೆಚ್ಚರಿಸಿಹನು || 2 ||

ಪುರಜನರಿಂತಾಡುತಿರಲು | ಧುರದಿ ಹರಿಮುಖ್ಯರ ಗರ್ವ |
ಮುರಿದೆನೆಂಬುಲ್ಲಾಸದಿಂದ | ಹರಿಗಳೆರಡನು ||
ಭರದಿ ತನ್ನಂದೆಸೆಯೊಳ್ ನಡೆಸಿ | ಕರಿ ರಥಾಶ್ವ ಸೇನೆ ಸಹಿತ |
ಮೆರೆವ ವಾದ್ಯರವದಿ ಪಿತನ | ಸರಿಸಕ್ಕಂದ || 3 || 199 ||

**ವಾರ್ಧಕ**
ಪಟ್ಟಣದ ಪೊರವಳಯದೊಳ್ ಚಿತ್ರಮಯವಾಗಿ |
ಕಟ್ಟಿದಧ್ವರ ಮಂಟಪದ ನಡುವೆ ದೀಕ್ಷೆಯಿಂ |
ನೆಟ್ಟನೆ ಪರಿಗ್ರಹಿಸಿ ಭೂಸುರರ್ ವೆರಸಿ ಕುಳ್ಳಿರ್ದಾ ಪಿತಂಗೆ ಬಂದು ||
ಮುಟ್ಟಿ ಚರಣಂಗಳಂ ಸಾಷ್ಟಾಂಗದಿಂದ ಪೊಡ |
ಮಟ್ಟು ತಾಮ್ರಧ್ವಜಂ ಕೈಮುಗಿದು ತರಿಸಿ ಮುಂ |
ದಿಟ್ಟನೆರಡಶ್ವಂಗಳಂ ಬಳಿಕ ಶಿಖಿಕೇತು ನಂದನಂಗಿಂತೆಂದನು || 1 || 200 ||

**ಮಧುಮಾಧವಿ – ಏಕ**
ಕೇಳು ಮಗನೆ ಈ ಚೋದ್ಯವಿದೇನು |
ಪೇಳು ಮನದಿರವೇನೆಂಬುದ ನೀನು || ಪ ||
ವರುಷವಾಗದ ಮುನ್ನ | ಬರುವಾಗಮವೆ ನಿನ್ನ |
ಧರಣಿಪರೊಡನೀಗ | ಧುರವಾದುದೊ ||
ಮರೆಮಾಜದುಸಿರಿನ್ನಾ | ತುರಗವಾರದು ಚಿನ್ನಾ |
ಭರಣ ಭೂಷಣದಿಂದ | ಮೆರೆವುತ್ತಲಿಹುದು || 1 ||

ಎನ್ನ ಬಳಿಗೆ ನೀನು | ಇನ್ನೇಕೆ ಬಂದುದನು |
ಭಿನ್ನವಿಲ್ಲದೆ ಪೇಳು | ಎನ್ನೊಳಿನ್ನು ||
ಖಿನ್ನನಾಗದಿರೆಂದು | ಮನ್ನಿಸಿ ಕೇಳಲಂದು |
ಉನ್ನತಿಕೆಯೊಳೆಂದ | ತನ್ನ ಶೌರ್ಯವನು || 2 || 202 ||

**ಸೌರಾಷ್ಟ್ರ – ಅಷ್ಟ**
ಜೀಯ ಪರಾಕು ನಿನ್ನಡಿಗೆರಗುವೆನೆನ್ನ | ಮಾತ ಕೇಳು || ಪೇಳ್ವೆ |
ಬಾಯಾರವಲ್ಲ ಭೂಪರೊಳಾದ ಕಲಹವ | ತಾತ ಕೇಳು || 1 ||

ಗಜಪುರದರಸ ಧರ್ಮಜನತಿ ಬಲನಂತೆ | ತಾತ ಕೇಳು || ಬಹು |
ಭುಜಬಲನರ್ಜುನನೆಂಬ ಸೋದರನಂತೆ | ತಾತ ಕೇಳು || 2 ||

ಯಾಗವ ರಚಿಸಿ ಭೂಪರ ಮೇಲೆ ಹಯಗೊಂಡು | ತಾತ ಕೇಳು || ಈಗ |
ಭೋಗಿಶಯನ ವೃಷಕೇತು ಮನ್ಮಥ ಸಹ | ತಾತ ಕೇಳು || 3 ||

ಅತಿರಥರೊಡಗೂಡಿ ಪಾರ್ಥ ನಮ್ಮೆದಿರಿಗೆ | ತಾತ ಕೇಳು || ಮುಂದೆ |
ಪಥಗಟ್ಟಿ ಕುದುರೆಯೆಮ್ಮಶ್ವಕ್ಕೆ ಬಿಟ್ಟರು | ತಾತ ಕೇಳು || 4 ||

ಹಳಚಿ ಮಾರ್ಬಲ ಗೆದ್ದು ಕೃಷ್ಣಾರ್ಜುನರ ಈಗ | ತಾತ ಕೇಳು || ಕಟ್ಟಿ |
ಕಳನೊಲು ಕೆಡಹುತಶ್ವವ ಕೊಂಡು ಬಂದೆನು | ತಾತ ಕೇಳು || 5 || 207 ||

**ಭಾಮಿನಿ**
ಲೋಕನಾಯಕ ಲಕುಮಿಪತಿ ಮೂ |
ಲೋಕ ವೀರಾರ್ಜುನರ ಸಹಿತಲೆ |
ತಾ ಕೆಡಹಿ ದ್ವಯತುರಗಗೊಂಡಯ್ತಂದೆನೆನೆ ಕೇಳ್ದು ||
ಸಾಕು ಗಳಹದಿರೆನುತ ಮಗನಿಂ |
ಗಾ ಕರುಣನಿಧಿ ಮೊಗವದಿರುಹು |
ತ್ತಾ ಕಮಲನಾಭನ ಪದಾಬ್ಜವ ನೆನೆದು ಬಿಸುಸುಯ್ದು || 1 || 208 ||

**ನೀಲಾಂಬರಿ – ರೂಪಕ**
ಇನ್ನೇನುಸಿರಲಿ ಎನ್ನಯ | ಪುಣ್ಯದ ಫಲವಿನಿತಲ್ಲದೆ |
ಮುನ್ನೇಳ್ ಮಖವೆಸಗಿದರಾ | ಸನ್ನುತ ಶ್ರೀಹರಿಯ ||
ಕಣ್ಣಿಗೆ ಗೋಚರಿಸದ ಪ್ರ | ಸನ್ನ ರಮಾಪತಿಯೆನ್ನುತ |
ತನ್ನೊಳಗಿರಿಸಿಹನಂತೆ ಸು | ಧನ್ಯನೊ ಧರ್ಮಜನು || 1 ||

ಪದುಮದಳಾಕ್ಷನ ಕಾಣದೆ | ಹುದುಗುತ ಚಿಂತೆಯೊಳಾನಿರೆ |
ಪದುಮಜಸಂಭವ ಬಂದತಿ | ಒದಗಿಸು ಯಾಗವನು ||
ಇದರೊಳು ಲಕ್ಷ್ಮೀಶನು ನಿನ | ಗೊದಗುವನೆಂದಾ ವ್ರತಿಪನ |
ಮೃದುವಹ ವಚನಕೆ ತಾನೇ | ಒದಗುವ ಮಧುರಿಪುವ || 2 ||

ದಾರಿಯ ತಡೆದಚ್ಯುತ ಕಂ | ಸಾರಿ ಕಿರೀಟಿಯ ಬಿಟ್ಟು ಸ |
ವಾರಿಯ ತಂದಿದಿರ್ ನಿಲಿಸಿಹ | ವೀರನೆ ಕಡು ಖೂಳ ||
ವಾರಿಜ ತುಳಸಿಯ ಬಿಟ್ಟತಿ | ಚಾರು ಸುಗಂಧವಿದೆನುತಲೆ |
ಕಾರಿಯಕೊದಗದ ಸುಮಗಳ | ಹಾರಯಿಸಿದನಿವನು || 3 ||

ಪುತ್ರೋತ್ಸಹವಾಗಲು ಪ | ರತ್ರಕೆ ಸಾಧನವೆಂಬರು |
ಪ್ರತ್ಯಕ್ಷದಿ ಕಂಡರೆ ಇವ | ಶತ್ರುವೆ ಮಗನಲ್ಲ ||
ಉತ್ತಮ ಸುದತಿಗೆ ಪತಿ ತಾ | ನೊತ್ತಿನೊಳಿಲ್ಲದೆ ತಾರಾ |
ಮೊತ್ತದಿ ಶಶಿಕಾಣಿಸದಂ | ತಿತ್ತೆಸೆದುದು ಸಭೆಯು || 4 ||

ಸಾಕಿನ್ನೇತಕೆ ದೀಕ್ಷೆಯು | ಸಾಕಿನ್ನೀ ಮಖ ತುರಗವು |
ಸಾಕೀ ಸತಿಸುತ ಭಾಗ್ಯವ | ನಾ ಕಮಲಾಕ್ಷನನು ||
ಆ ಕಡೆಯೊಳಗಿಹ ತೋರ್ದಡ | ನೇಕದ ಫಲ ಪ್ರಾಪ್ತಿಪುದೈ |
ನೀ ಕಾಣಿಸು ಕೃಷ್ಣನ ಪದ | ನಾ ಕಾಂಬೆನು ಯೆನುತ || 5 || 213 ||

**ವಾರ್ಧಕ**

ಭೂರಮಣ ಕೇಳ್ ಕೃಷ್ಣಕಾಂಕ್ಷೆಯಿಂ ದುಗುಡದಿ ಮ |
ಯೂರಧ್ವಜ ಕ್ಷಿತೀಶ್ವರನಿರಲ್ಕತ್ತ ರಣ |
ಧಾರಿಣಿಯೊಳಸುರಾರಿಗೆಚ್ಚರಿಕೆ ತಲೆದೋರಿತರ್ಜುನಂಗರಿವಾದುದು ||
ವೀರಭಟರೆಲ್ಲರ್ಗೆ ಮೂರ್ಛೆ ತಿಳಿದುದು ಬಳಿಕ |
ವಾರಿಜಾಕ್ಷಂ ಸಕಲ ಸೇನೆಯಂ ಸಂತಯಿಸಿ |
ಚೋರಬುದ್ಧಿಯೊಳೊಂದುಪಾಯಮಂ ಕಂಡಾ ಧನಂಜಯಂಗಿಂತೆಂದನು || 1 || 214 ||

**ಸುರುಟಿ – ಆದಿ**

ಲಾಲಿಸಿಂದ್ರಜಾತ | ನಿನ್ನೊಳು | ಪೇಳುವೆನತಿಖ್ಯಾತ ||
ತೋಳಬಲದಿ ಭೂ | ಪಾಲನೋಡೆಮ್ಮನು |
ಬೀಳುಗೆಡಹಿ ಹಯ | ಕೋಳುಗೊಂಡೊಯ್ದನು || ಪ ||
ವೀರವೈಷ್ಣವನವನು | ಯುದ್ಧದಿ | ತೀರದು ನಮಗಿನ್ನು ||
ಚಾರು ವುಪಾಯದಿ | ಧಾರಿಣಿಪನ ಮನ |
ಗಾರುಗೆಡಿಸುತೆಮ್ಮ | ಕಾರಿಯವೆಸಗುವ || 1 ||

ಸೇನೆ ಪಿಂದಯ್ತರಲಿ | ಸುಮ್ಮನೆ | ನೀನೆನ್ನೊತ್ತಿನಲಿ ||
ಬಾ ನಡೆಯೆನುತಲೆ | ವಾನರಧ್ವಜನನು |
ತಾನೊಡಗೊಂಡಾ | ದಾನವರಾತಿಯು || 2 || 216 ||

**ಭಾಮಿನಿ**

ಪೃಥಿವಿಪತಿ ಕೇಳರ್ಜುನನ ಮಾ |
ಪತಿಯು ತಾನೊಡಗೊಂಡು ಪಥದಲಿ |
ಕೃತಕದಿಂ ಗುರುಶಿಷ್ಯರಾಗುತ ಕಪಟರೂಪಿಗಳು ||
ಜತೆಯೊಳಯ್ತರೆ ರತ್ನ ನಗರದ |
ಪತಿ ಮಯೂರಧ್ವಜನು ಲಕ್ಷ್ಮೀ |
ಪತಿಯ ಚರಣಧ್ಯಾನದಲಿ ನಿಶಿ ಕಳೆದ ತೋಷದಲಿ || 1 || 217 ||

**ಪಂತುವರಾಳಿ - ಏಕ**

ಕೇಳು ಕೇಳೈ ಕ್ಷಿತೀಶ್ವರ | ನಾ ಪೇಳ್ವ ವಿಚಿತ್ರವ |
ಕೇಳು ಕೇಳೈ ಕ್ಷಿತೀಶ್ವರ || ಪ ||
ಕೇಳು ದಿನೇಶನು ಪೂರ್ವಾಚಲದೊಳು |
ಓಲಗವೀಯೆ ಮಯೂರಧ್ವಜಕ್ಷಿತಿ |
ಪಾಲನು ಸಂಧ್ಯಾವಿಧಿಯನುಸರಿಸಿ ಗೋ |
ಪಾಲನನೀಕ್ಷಿಪ ತವಕಿಗನಾಗುತ || 1 ||

ಪರಿವಾರವು ಪುರಜನ ಪೌರೋಹಿತ |
ವರ ಮಂತ್ರಿಯು ದ್ವಯತುರಗವ ಸಹಿತಲೆ |
ಪರಮೋತ್ಸವದಿಂದರಸಿ ಸಮೇತದಿ |
ತರಳನವೆರಸಿಯೋಲಗದೊಳಿರ್ದನು || 2 ||

ಆ ಸಮಯದಿ ವರ ವಾಸವಿ ಕೃಷ್ಣರು |
ಭೂಸುರರೋಲ್ ಲಕ್ಷ್ಮೀಶನ ಸ್ಮರಿಸುತ |
ಘೋಷದೊಳಾ ಧರಣೀಶನಿದ್ದೆಡೆಗೈ |
ದಾಶೀರ್ವಾದದಿ ಹರಸಿಂತೆಂದರು || 3 || 220 ||

**ವಾರ್ಧಕ**
ಮತ್ತೆಲೆ ಮಹೀಪಾಲಶಾರ್ದೂಲ ನಿನಗಾಗ |
ಲುತ್ತರೋತ್ತರವೆಂದು ತನಗೆ ನೀ ಬೇಡಿದುದ |
ನಿತ್ತಪೆ ಮಹಾದಾನಿಯೆಂದು ಶಿಷ್ಯನವೆರಸಿ ಬಂದೆ ನಾನೀಗ ನಿನ್ನ ||
ಉತ್ತಮಾಧ್ವರಶಾಲೆಗೆಂಬ ದ್ವಿಜನಂ ಕಂಡು |
ಚಿತ್ತದೊಳ್ ಬೆದರಿ ನೃಪನಿದಿರೆದ್ದು ಪದಕೆರಗಿ |
ದತ್ಯರ್ಘ್ಯ ಪಾದ್ಯಾಸನಂಗಳಿಂದುಪಚರಿಸಿ ಕುಳ್ಳಿರಿಸುತಿಂತೆಂದನು || 1 || 221 ||

**ತೋಡಿ - ತ್ರಿವುಡೆ**
ಚಂದವೇನೈ ದಿವಿಜ ಮೊದಲೇ |
ವಂದಿಸದ ಕ್ಷತ್ರಿಯರಿಗೆ |
ಬಂದು ವಿಪ್ರರು ಪರಸೆ ಭೂವರ ||
ಸಂದುದಯ್ಯ ಜನ್ಮ ನೀವು |
ಬಂದ ಕಾರ್ಯ ಪೇಳಿರೆನಲಿಂ |
ತೆಂದ ಭೂಸುರೇಂದ್ರನವನೊಳು || 1 ||

ಅಡಸಿದಾಪತ್ತಿನಲಿ ತನ್ನ |
ಬಿಡಿಸಿ ಕಾವರಿಂಗೆ ಮುನ್ನ |
ತಡೆಯದಾಶೀರ್ವಾದಗೆಯ್ಯಲು ||
ಒಡನೆ ದೋಷಮಿಲ್ಲ ಕೇಳಿ |
ದೊಡನೆ ಈವೆಯೆಂದು ನಾನಿ |
ನ್ನೆಡೆಗೆ ಬಂದೆನೆನಲು ನುಡಿದನು || 2 ||

ಲಾಲಿಸಯ್ಯ ಪೃಥ್ವಿಸುರ ನೀ |
ಬಾಲನೊಡಗೊಂಡೆನ್ನೊಳೀಗ |
ಶೀಲ ನೀನಯ್ತಂದರಿಂದಲಿ ||
ಪೇಳಲೇನ್ ಕೃತಾರ್ಥನಾದೆ |
ಪೇಳು ನಿನ್ನಪೇಕ್ಷೆಯೀಗ |
ಪಾಲಿಸುವೆ ತಾನೆನಲು ನುಡಿದನು || 3 ||

ಲಾಲಿಸಯ್ಯ ಭೂಪ ಎನ್ನ |
ಬಾಲ ಕೃಷ್ಣಶರ್ಮನೆಂಬ |
ಶೀಲಗೆ ವಿವಾಹಕೋಸ್ಕರ ||
ಆಲೋಚಿಸಿ ದ್ರವ್ಯದನು |
ಕೂಲಮಿತ್ತದೊಳು ಕೇಳ್ ಕೃ |
ಪಾಳು ನಿನ್ನ ಬಳಿಗೆ ಬಂದೆನು || 4 ||

ಅರಸ ನಿನ್ನ ರಾಷ್ಟ್ರದೊಳಗೆ |
ದುರುಳಸಿಂಹನಯ್ದಿ ಪಥದಿ |
ಬರಲುಗೊಡದೆ ತಡೆದೀಗೆನ್ನಯ ||
ತರಳನನ್ನು ಪಿಡಿದು ನಾನಾ |
ಪರಿಯ ನಿರ್ಬಂಧಗಳ ಕೊಳ್ಳಿ |
ಸಿರುವುದೇನೆಂಬೆನಲು ಕೇಳುತ || 5 || 226 ||

**ಭಾಮಿನಿ**
ಬುಧಕುಲೋತ್ತಮ ಎನ್ನ ರಾಜ್ಯದಿ |
ಮದನಪಿತ ಹರಿಯೊಬ್ಬನಲ್ಲದೆ |
ಬದಲು ಹರಿ ನಿನ್ನಾತ್ಮಜಂಗೆಲ್ಲೊದಗಿತಿಂದಿನಲಿ ||
ಅದುಭುತವಿದಾಶ್ಚರಿಯ ಕೇಳಿದೆ |
ಸದಮಲನೆ ಎನ್ನಿಂದಲಹುದೇ |
ನದನು ವಿಸ್ತರಿಸೆನಲು ಕಪಟವೃತಿಪನುಸಿರಿದನು || 1 || 227 ||

**ಬೇಗಡೆ – ಏಕ**
ವರ್ಣಿಸಲಿನ್ನೆಂತು ಮಹರಾಯ | ನಾ ಪೇಳ್ವ ನುಡಿಯ |
ಪೂರ್ಣ ದಯವಿಟ್ಟಾಲಿಸೊ ಜೀಯಾ ||
ಕರ್ಣಕತಿಕಠೋರ ಸಿಂಹನ |
ದುರ್ನುಡಿಯ ಸೌಭಾಗ್ಯಸುಖ ಸಂ |
ಪೂರ್ಣ ದಿಟ ಸುಳ್ಳಲ್ಲ ನಾ ವಿ |
ಸ್ತೀರ್ಣಗೆಯ್ಯುವೆ ಬೇಸರಿಸದಿರು || ವರ್ಣಿಸಲಿನ್ನೆಂತು || ಪ ||
ಎನ್ನ ಭಕ್ಷಿಸು ಚಿಣ್ಣನೋರ್ವನ ಮನ್ನಿಸೆನ್ನುತ | ನುಡಿಯಲು |
ನಿನ್ನದೀ ಕಡು ಖಿನ್ನ ದೇಹವ ತಿನ್ನೆನೆನುತ | ಪೇಳಲು |
ರನ್ನನುಳಿಸುವರಿಲ್ಲವೇ ಸಂಪನ್ನನೆನ್ನುತ || ಕೇಳ್ ಬಲು |
ಮನ್ನಿಸುತ ನಾ ಬನ್ನ ಬಡುವುದ |
ಘನ್ನಗತಗನು ತನ್ನ ಮನದೊಳು |
ಎಣ್ಣಿಸುತ ಇನ್ನೆನ್ನೊಳೆಂತಿನ್ನೆಂಬೆ ಶಿವ ಶಿವ || 1 || 228 ||

**ವಾರ್ಧಕ**
ಏಸು ದುಃಖಿಸಿದರಿವನಂ ಬಿಡುವನಲ್ಲಣುಗ |
ನಾಸೆಯುಳ್ಳಡೆ ದಾನಕರ್ಮ ಕ್ರತುಗಳ್ ನಡೆಸಿ |
ತಾ ಸುಶೀಲತ್ವದಿಂ ಮೆರೆವಾ ಶಿಖಿಧ್ವಜನ ದೇಹ ಭಾಗದೊಳರ್ಧವ ||
ತಾ ಸುತನ ಬಿಡುವೆ ನೀ ಬರುವನಕಮೀತನಂ |
ಗಾಸಿಸುವನಲ್ಲೆನುತಲಾ ನೃಕೇಸರಿ ತನಗೆ |
ಭಾಷೆಯಂ ಕೊಟ್ಟು ಕಳುಹಿಸಲರ್ಭಕನ ಭ್ರಮೆಯೊಳಯ್ತಂದೆ ನಿನ್ನ ಬಳಿಗೆ || 1 || 229 ||

**ಭಾಮಿನಿ**
ಎನಲು ವಿಪ್ರನ ನುಡಿಗೆ ಜನಪತಿ |
ಮನದಿ ಗ್ರಹಿಸಿದನೆಂದಿಗಾದರು |
ತನುವಶಾಶ್ವತ ಬುಧನಿಗೀಯಲು ಕೀರ್ತಿ ಧರಣಿಯಲಿ ||
ಇನಶಶಿಗಳಿಪ್ಪನಕವಿಹುದೆಂ |
ದೆನುತಲಾತನ ಕೂಡೆ ತನ್ನಯ |
ತನುವನಿತ್ತಪೆನೆನಲು ಮರುಗಿದುದಖಿಳ ಜನನಿವಹ || 1 || 230 ||

**ಶಂಕರಾಭರಣ - ಏಕ**
ಶಿವ ಶಿವೆಲ್ಲಿಂ ಬಂದನಿವನು |
ಭುವಿಯಸುರರೊಳುಂಟೆಮಿನಿತು |
ಭುವನಪಾಲನರ್ಧ ದೇಹ | ಮಿವನು ಕೇಳ್ವರೆ ||
ಭುವನಪಾಲನರ್ಧದೇಹ |
ಮಿವನು ಕೇಳ್ವ ಬಲಿಯೊಳ್ ಪಿಂತೆ |
ಭುವಿಯ ಕೇಳ್ದ ದ್ವಿಜನ ತೆರದೊ | ಳಿವನು ಕೇಳ್ವನು || 1 ||

ಆನೆ ಕುದುರೆ ಕನಕ ದ್ರವ್ಯ |
ಧೇನು ಸ್ವಾಸ್ತಿ ವಸ್ತು ವಡವೆ |
ದಾನ ಕೇಳ್ವುದುಂಟು ಬುಧರು | ಪ್ರಾಣ ಕೇಳ್ವರೆ ||
ಪ್ರಾಣ ಕೇಳ್ವುದೆಂತು ಚೋದ್ಯ |
ಮಾನವಾಧಿಪರೊಳು ದ್ರೋಹ | ತಾನೆ ಕೇಳ್ವರೆ || 2 ||

ಎಂದು ಪುರದ ಜನರು ಪಾರ್ವ |
ವೃಂದ ಸಹಿತಲೆದ್ದು ಕಿನಿಸಿ |
ನಿಂದ ಕೃತಕಯತಿಯ ಜರೆಯ | ಲಂದು ಕೇಳುತ ||
ನಿಂದ ಕೃತಕ ಯತಿಯ ಜರೆಯ |
ಲಂದು ಕೇಳುತವನಿಪಾಲ |
ನೆಂದನವರ ಸಂತವಿಡುತ | ಚಂದದಿಂದಲಿ || 3 || 233 ||

**ರೇಗುಪ್ತಿ - ತ್ರಿವುಡೆ**
ಮಾಣಿಸಿನ್ನಳಲಬೇಡಿ | ದೇಹವೇನಲ್ಪ |
ಪ್ರಾಣರ್ಗೆ ನಿಜವೆ ನೋಡಿ ||
ಕಾಣುತ್ತ ದಿವಿಜರ | ಪ್ರಾಣವ ಸಲಹುವ |
ಕ್ಷೋಣಿಪರಲ್ಲದೆ | ತ್ರಾಣಿಗಳಾರಿನ್ನು || 1 ||

ಹರಿಶ್ಚಂದ್ರಾದ್ಯವನಿಪರು | ಧರ್ಮದಿ ಪಿಂತೆ |
ಮೆರೆದಲ್ಲದೆಲ್ಲಿಹರು ||
ನರಬಾಳ್ಕೆ ಸ್ಥಿರವೆ ನಾ | ನರುಹಿದ ಬಳಿಕ ಮಾ |
ತೆರಡಿಲ್ಲ ದೇಹ ಭೂ | ಸುರಗರ್ಧವಿತ್ತೆನು || 2 ||

ಗಜಬಜಿಸದಿರೆಲ್ಲರು | ಮೆಚ್ಚುವರೀಗ |
ಅಜಭವಾದ್ಯನಿಮಿಷರು ||
ಸುಜನರು ಸುಖದಿಂದ | ವಿಜಯರಾಗಿರೆ ವಿಷ್ಣು |
ನಿಜಪದ ಸೇರ್ವೆನೆಂ | ದ್ವಿಜಮುಖ್ಯರ್ಗೆರಗಿದ || 3 || 236 ||

**ವಾರ್ಧಕ**
ಜನಪನಿಂತೆಂದು ಜನನಿವಹಮಂ ಬೋಳಯಿಸು |
ತನುಮಾನಿಸದೆ ನಿತ್ಯ ಕ್ರಮವನನುಸರಿಸುತ್ತ |
ವನಮಾಲೆಯಂ ಕೊರಳೊಳಾಂತು ಭೂಷಿತನಾಗಿ ಕಪಟಯತಿಯಂ ಪೂಜಿಸಿ ||
ತನುವರ್ಧ ಕೃಷ್ಣಾರ್ಪಣಂಗೆಯ್ದು ವಿಪ್ರರಿಗೆ |
ಧನ ಕನಕ ವಸ್ತು ಭೂದಾನ ಧರ್ಮದಿ ದಣಿಸಿ |
ವನಜಾಕ್ಷನಂ ಸ್ಮರಿಸಿ ಕಂಬವೆರಡೂಣಿಸುತ ಶಸ್ತ್ರಧಾರಿಗಳ ಕರೆಸಿ || 1 || 237 ||

**ಭಾಮಿನಿ**
ಧರಣಿಪತಿ ತಾ ತನುವ ಸೀಳಿಸಿ |
ಧರೆಯಮರನಿಂಗೀವೆನೆಂಬೀ |
ಪರಿ ವಿಚಿತ್ರವ ಕೇಳಿ ಬೇಗದೊಳಾ ಕುಮುದ್ವತಿಯು ||
ಅರಸನೆಡೆಗಯ್ತಂದು ಧೊಪ್ಪನೆ |
ಚರಣದೆಡೆಯೊಳು ಬಿದ್ದು ಪೊರಳುತ |
ಮರುಗಿ ವಲ್ಲಭನೊಡನೆ ಪೇಳಿದಳಧಿಕ ದುಗುಡದಲಿ || 1 || 238 ||

**ನೀಲಾಂಬರಿ - ಆದಿ**
ಕರುಣನಿಧಿ ಲಾಲಿಸು ಕಾಂತ | ಕರುಣವೆ ಎನ್ನಗಲಿಂತಾ ||
ಮರಣವ ನೀ ಬಯಸುವದು | ತರವೆ ನೋಡ್ ಮನವೊಲಿದು || 1 ||

ಅವನೀಶನರ್ಧಾಂಗಿಯಿರೆ | ಭುವನವ ಪಾಲಿಸುತಿಹರೆ ||
ತವಕದೊಳೀವುದು ತನ್ನ | ಸುವಿಲಾಸದಿಂದಿರು ಮುನ್ನ || 2 ||

ಆದಡೀವಿಪ್ರನ ಛಲವು | ಸಾಧಿಸಿ ಸೌಖ್ಯದ ಫಲವು ||
ಮಾಧವಗರ್ಪಿಸಿ ಕಡೆಗೆ | ಈ ವಿಧಿಯಾದುದು ನಮಗೆ || 3 || 242 ||

**ಭಾಮಿನಿ**
ಸತಿ ಪುರುಷನರ್ಧಾಂಗಿಯಾಗಿರೆ |
ಕ್ಷಿತಿಪ ತನು ದಂಡಿಸದೆ ತನಗೀ |
ಯತಿಗೆನಲು ಪರಿವಾರ ಮೆಚ್ಚಿತು ರಮಣಿಯುತ್ತರಕೆ ||
ಪತಿವ್ರತೆಯ ನುಡಿಗುತ್ತರವ ಭೂ |
ಪತಿಯು ಈಯದೆ ಸುಮ್ಮನಿರುತಿರೆ |
ಕೃತಕಯತಿಯಾಲಿಸುತ ಅರಸನೊಳೆಂದ ನಸುನಗುತ || 1 || 243 ||

**ತೋಡಿ – ಅಷ್ಟ**
ದಿಟವಯ್ಯ | ಭೂಪ ದಿಟವಯ್ಯ ||
ದಿಟವಯ್ಯ ಭೂಪ ನಿನ್ನರಸಿಯ ನುಡಿಯು |
ಸಟೆಯಲ್ಲವಿದು ಶಾಸ್ತ್ರ ನಿಗಮ ಪದ್ಧತಿಯು || ಪ ||
ಸಾಸಿರ ಮಾತಿನೊಳೇನು ಕಾರ್ಯಗಳು |
ಬೇಸರದಾಲಿಸು ದಯದಿ ಇಂದಿನೊಳು ||
ತಾ ಸತಿಸುತರನ್ನು ಮೆಲುವೆನೆಂದೆನುತ |
ಆ ಸಿಂಹ ನುಡಿದುದಿಲ್ಲೆನ್ನೊಳು ಮಾತ || ದಿಟವಯ್ಯ || 1 ||

ತನು ಸೀಳ್ದಮೃತಕಲಶವ ರವಿಸೂನು |
ರಣದೊಳಗೀಯಲಿಲ್ಲವೆ ಮಾಹಾತ್ಮಕನು ||
ಅನುಮಾನವುಂಟೇ ಧಾರ್ಮಿಕರಲ್ಲಿ ಗುಣಕೆ |
ತನಯನ ಋಣವಷ್ಟೆ ಉಸಿರಲಿನ್ನೇಕೆ || 2 ||

ಭೂಮೀಶನರ್ಧ ದಕ್ಷಿಣಭಾಗವೆನುತ |
ಕಾಮಿಸಿ ವರಸಿಂಹ ತಾ ಬೇಗೆಂದೆನುತ ||
ಪ್ರೇಮದಿ ಕಳುಹಿಸಲಯ್ದ ನಿನ್ನೆಡೆಗೆ |
ಈ ಮಾತಿಗೇನು ಸಂಶಯ ಭೂಪ ನಿನಗೆ || 3 || 246 ||

**ವಾರ್ಧಕ**
ಅನ್ಯರಿಂ ಕೊಯ್ಸಲಾಗದು ತನ್ನ ಸತಿಸುತರ್ |
ಖಿನ್ನರಾಗದೆ ಸೀಳಬೇಕು ನೃಪನಕ್ಷಿಯೊಳು |
ಮುನ್ನುದಕವೋಸರಿಸದಂತೆ ದಕ್ಷಿಣಭಾಗ ತಂದು ಕೊಡು ನಿನ್ನಣುಗನ ||
ಇನ್ನು ಬಿಡುವಲ್ಲದಡೆ ಪೋಗು ಸುಮ್ಮನೆ ನೀನು |
ಬನ್ನಬಡಬೇಡೆನುತ ದುಷ್ಟಕೇಸರಿ ಕೋಪ |
ದಿನ್ನುಡಿದುದೆಲೆ ಭೂಪನೆನೆ ವಿಪ್ರಗಾ ಕ್ಷಿತಿಪ ಮನ್ನಿಸುತಲಿಂತೆಂದನು || 1 || 247 ||

**ಶಂಕರಾಭರಣ - ರೂಪಕ**
ಭೂಸುರೇಶ ಲಾಲಿಸಯ್ಯ | ಬೇಸರಿಲ್ಲದೆ | ಈಗ |
ವಾಸುದೇವಾರ್ಪಣೆಯಗೆಯ್ದು | ಕ್ಲೇಶಮಿಲ್ಲದೆ ||
ತೋಷವಾಯ್ತು ನಿನ್ನಿಂದೀಗ | ದೋಷ ಹರಿವುದು | ಯಮನ |
ಪಾಶವೆನಗೆ ತಪ್ಪಿಸಿ ವಿ | ಲಾಸಗೊಳಿಸಿದುದು || 1 ||

ಮಡದಿ ಮಕ್ಕಳಿಂದ ನುಡಿಯ | ಮನಕೆ ತಾರದೆ | ಪ್ರಜೆಯು |
ಗಡಬಡಿಸಿದರೆಂದು ನೀನ | ಧೈರ್ಯನಾಗದೆ ||
ಒಡನೆಯೆಂದ ಮಾತಿಗೆನ್ನೊ | ಳೆಡರಿನ್ನಿಲ್ಲವೈ | ನಂಬು |
ಕೊಡುವೆ ದೇಹ ನಿನ್ನ ಸುತನ |ಸಲಹಿ ಸುಖಿಯಾಗೈ || 2 || 249 ||

**ಭಾಮಿನಿ**
ಎಂದು ಈ ಪರಿ ಬುಧನ ಮನಕಾ |
ನಂದಗೊಳಿಸುತ ಚಿತ್ತದಲಿ ಗೋ |
ವಿಂದನಡಿಗಳ ಸ್ಮರಿಸುತಡಿಗಡಿಗವನಿಪಾಲಕನು ||
ನಂದನನ ಕರೆದಿದಿರಿನಲಿ ಬಾ |
ರೆಂದು ಪೂರ್ಣೋಲ್ಲಾಸದಲಿ ಕ |
ಯ್ಯಿಂದಲಪ್ಪುತಲಧಿಕ ಮೋಹದೊಳೆಂದನವನೊಡನೆ || 1 || 250 ||

**ನಾದನಾಮಕ್ರಿಯೆ – ಅಷ್ಟ**
ಮಗನೆ ಚಿಂತಿಸದಿರು ಮನದಲ್ಲಿ | ನಿನ್ನ |
ಖಗತುರಂಗನು ಕಾವ ದೃಢದಲ್ಲಿ ||
ಜಗದಾಧಿಪರ ಪಗೆ ಬೆಳೆಸದೆ | ಬಾಳು |
ಮಿಗೆ ಪ್ರಜೆಗಳನೆಲ್ಲ ದಣಿಸದೆ || 1 ||

ನರನಾರಾಯಣರುಗಳತಿ ಬೇಗ | ಪೋಗಿ |
ಕರೆತಂದು ಮನೆಯೊಳರ್ಚಿಸುತೀಗ ||
ತುರಗಾಧ್ವರವನಿಲ್ಲಿ ಪೂರಯಿಸು | ಹರಿ |
ಶರಣನೆನಿಸಿ ರಾಜ್ಯ ಪಾಲಿಸು || 2 ||

ಪೂರ್ವಾರಭ್ಯದ ಮಂತ್ರಿ ಇವನನು | ಇನ್ನು |
ಸರ್ವಥಾ ಬಿಡದೆ ರಕ್ಷಿಸು ನೀನು ||
ಗರ್ವಿಸದಿರು ಬುಧಜನರೊಳು | ನಿನ್ನ |
ಸರ್ವಾತ್ಮಕನು ಕಾಯ್ವ ದಯದೊಳು || 3 || 253 ||

**ವಾರ್ಧಕ**
ಇಭಪುರಾಧಿಪ ಕೇಳು ಮಗನೊಳಿಂತೆಂದು ಭೂ |
ಸಭೆಗೆರಗಿ ಗುರು ಬುಧಾದ್ಯರ ಪದಕೆ ವಂದಿಸುತ |
ಲಬುಜಭವಮುಖ್ಯಮರ ದಿಕ್ಪಾಲರಂ ನಮಿಸಿ ನವಗ್ರಹಂಗಳ ಪ್ರಾರ್ಥಿಸಿ ||
ಶುಭವಚನದಿಂದ ಸತಿಸುತರಾಯುಧವ ಕೊಳ್ಳಿ |
ರಬುಜನಾಭನ ಧ್ಯಾನದಿಂ ತನು ದ್ವಿಭಾಗಿಸೆಂ |
ದುಭಯರಿಂಗರುಹಿ ಕಂಬದ ನಡುವೆ ತನುಬಾಗಿ ತಲೆಯೊಡ್ಡಿ ನಿಂದನರಸ || 1 || 254 ||

**ಸೌರಾಷ್ಟ್ರ - ತ್ರಿವುಡೆ**
ಧರಣಿಪತಿ ಕೇಳಾ ಶಿಖಿಧ್ವಜ |
ಹರಿ ಸದಾ ವಸುದೇವನಾತ್ಮಜ |
ಹರಿ ಪರಾತ್ಪರಮೂರ್ತಿಯೆನುತಲಿ | ಕರವ ಮುಗಿದು || 1 ||

ನಿಲಲವನ ನೇಮದಲಿ ಸತ್ಯಸು |
ಲಲನೆಯಾಗಿಹ ವರಕುಮುದ್ವತಿ |
ತಳುವದಣುಗನ ನೆರವಿಗೊಂಡತಿ | ಸುಲಭದಿಂದ || 2 ||

ಸರಸಿಜಾಕ್ಷನ ಸ್ಮರಿಸಿ ರಾಯನ |
ಶಿರದೊಳಾಯುಧವಿಡುತಲಿರ್ವರು |
ಗರಗರನೆ ಸೀಳುತ್ತಲಿರ್ದರು | ಸರಸದಿಂದ || 3 ||

ಗಳದ ಪರಿಯಂತರದಿ ಶಸ್ತ್ರವ |
ಚಲಿಸೆ ಮುಖವೆರಡಾಗಿ ತೋರಲು |
ಲಲಿತವಾಮಾಕ್ಷಿಯಲಿ ಜಲಬಿಂ | ದಿಳುಹಿತಾಗ || 4 || 258 ||

**ಭಾಮಿನಿ**
ಭೂಮಿಪತಿ ಕೇಳಾ ಕ್ಷಿತೀಶನ |
ವಾಮಗಣ್ಣೊಳಿನೊಳಿಳಿವ ಜಲವನು |
ಆ ಮಹಾ ಕಪಟಾಕೃತಿಯ ದ್ವಿಜನೀಕ್ಷಿಸುತಲಾಗ ||
ತಾಮರಸಭವಜಾಂಡವೊಡೆದಂ |
ತಾ ಮಹಾಕೋಪದಲಿ ಗರ್ಜಿಸು |
ತಾ ಮಹಿಪನೊಡನೆಂದ ಭೂಸುರ ಸಭೆಯ ಮಧ್ಯದಲಿ || 1 || 259 ||

**ಬೇಗಡೆ - ಅಷ್ಟ**
ಧರ್ಮ ಸಾಕೊ | ನಿನ್ನ | ದುಃಖ ಸಾಕೊ ||
ಧರ್ಮಪತಿಗಳ ಬಳಿಗೆ ಬಂದರೆ |
ಕರ್ಮವೊದಗುವದಾದಮೇಲೆ |
ಕೂರ್ಮೆಗಳು ನಾ ಪೇಳಲಳವೆ ನೀ |
ನಿರ್ಮಲದಿ ಬಾಳಿರುವುದಿನ್ನು || ಧರ್ಮ ಸಾಕೊ || ಪ ||
ದಾನಧರ್ಮಗಳಲ್ಲಿ ಶೂರನೆಂದು ನಿನ್ನ | ನಾಮ |
ನಾನು ಕೇಳಿ ಬಂದೆನಯ್ಯ ವ್ಯರ್ಥ ಮುನ್ನ | ಕೇಳು |
ಭಾನುಶಶಿಗಳ ಕುಲದೊಳಿಂಥ ಭೂಪರನ್ನ || ಕಾಣೆ |
ಜಾಣ ನೀ ನಂಬಿಸುತಲನ್ಯರ |
ಪ್ರಾಣಹಾನಿಯ ದೂರ ಮಾಳ್ಪ |
ತ್ರಾಣಿಯೆಂಬುವ ಗುಣಗಳೀಗಳೆ |
ಕ್ಷೋಣಿಯಲ್ಲಿಹ ಜನರು ತಿಳಿದರು || ಧರ್ಮ ಸಾಕೊ || 1 ||

ಇಂದುಕುಲಸಂಜಾತನಾದ ಭೂಮಿಪಾಲ | ಕೇಳು |
ಬಂಧು ಕೃತ್ಯಗಳನ್ನು ಬಿಟ್ಟು ಇರುವನಲ್ಲ | ಎಂಬು |
ದೊಂದನರುಹದೆನ್ನೊಳು ನೀ ಒರೆದೆಯಲ್ಲ || ಬಹಳ |
ಎಂದು ಫಲವೇಂ ನಿನ್ನ ಸತಿಸುತ |
ರೊಂದುಮತವಾಗಿರುವುದೈ ನೀ |
ನಂದನನು ಘನವಲ್ಲ ಮೃಗಪತಿ |
ಕೊಂದು ತಿಂದರು ತಿನಲಿ ಸುಮ್ಮನೆ || ಧರ್ಮ ಸಾಕೊ || 2 || 261 ||

**ಭಾಮಿನಿ**
ಪೊಡವಿಪತಿಗಿಂತೆಂದು ಜರೆಯುತ |
ನಡೆಯಲಾ ಕಡು ವೃದ್ಧ ಪಾರ್ವನು |
ಕಡುಗಿ ಕೋಪದೊಳುರಿಮಸಗಿ ನೆಲನದುರುವಂದದಲಿ ||
ತಡೆಯದಯ್ಯ ರಲಾ ಕುಮುದ್ವತಿ |
ಒಡನೆ ಪತಿಗೆಚ್ಚರಿಸಿ ದುಃಖದ |
ಕಡಲೊಳಾಡುತ ನುಡಿದಳಾ ಸಭೆ ಮರುಗುವಂದದಲಿ || 1 || 262 ||

**ನೀಲಾಂಬರಿ - ಏಕ**
ಅಕಟಕಟಯ್ಯೊ ಮೋಹನ್ನ | ಸ್ಯೆರಿಸಲೆಂತು |
ಸಕಲಸದ್ಗುಣ ಸುವರ್ಣ ||
ಪ್ರಕಟಿಸಿತಯ್ಯೊ ಭಾಗ್ಯವು | ಧಾತ್ರಿಯೊಳೀಗ |
ಸುಖವಿಲ್ಲದಾಯ್ತು ಯೋಗ್ಯವು || 1 ||

ಕೆಡಿಸಿದೆ ವಿಪ್ರನೆಂದುದಾ | ಮಾತನು ಕೇಳಿ |
ಮುದದಿ ಈ ತನು ಸೀಳಿದ ||
ಕಡುಪಾಪಿ ಬುಧನಿವನು | ಎಲ್ಲಿಂದೆಲ್ಲೀಗ |
ನಡೆತಂದನತಿ ದುಷ್ಟನು || 2 ||

ವಿಧಿವಶದಿಂದ ನಿನ್ನ | ವಾಮಾಕ್ಷಿಯೊಳ್ |
ಉದಕವು ಸುರಿಯಲಿನ್ನಾ ||
ಮುದಿಪಾರ್ವನೀಕ್ಷಿಸುತ | ಓಡಿದನಲ್ಲ |
ಕಡುಧೂರ್ತ ಕೋಪಿಸುತ || 3 || 265 ||

**ವಾರ್ಧಕ**
ಉಡುಪವಂಶೋದ್ಭವನೆ ಲಾಲಿಸು ಶಿಖಿಧ್ವಜನ |
ಮಡದಿ ನಿನ್ನಶ್ರು ಜಲಮಂ ಕಂಡು ದುಃಖಿಸುತ |
ಕೊಡುವ ದಾನವಿದೊಲ್ಲೆನೆನುತಯ್ದನೆನೆ ಕೇಳಿ ಕಳವಳಿಸಿ ಕಂಗೆಡುತಲಿ ||
ಮುಡಿನೆಗಹಿ ದ್ವಯಭಾಗವಿಡಿದೊಂದೆಗೂಡಿದರೆ |
ಕಡೆಗಂಗಳಲಿ ಸುರಿದ ಜಲದ ಪರಿಗಳನೆಲ್ಲ |
ನುಡಿವೆನೆಂದೆನೆ ದೇಹ ಜೋಡಿಸಲ್ಬೂಪ ತಾ ನಂದನಂಗಿಂತೆಂದನು || 1 || 266 ||

**ಆನಂದಭೈರವಿ – ಏಕ**
ಮಗನೇ ನೀ ಹತ್ತಿರಿದ್ದೆನ್ನ |
ಹಗರಣವ ಕಂಡು ಬುಧನ |
ಬಿಟ್ಟೆಯ | ಪೋಗ | ಗೊಟ್ಟೆಯ || 1 ||

ಕೊರಳಕೊಯ್ಕ ಭೂಸುರನ್ನ |
ಕರೆದು ತಾ ಇನ್ನೊಮ್ಮೆಗವನ |
ನೋಡುವೆ | ನಾ ಮಾ | ತಾಡುವೆ || 2 ||

ಆದರವನ ಬಳಿಗೀಗಯ್ದಿ |
ಪಾದಕೆರಗಿ ಬಿಡದೆ ಕರೆದು |
ತಾರಯ್ಯ | ಬೇಗ ಬಾರಯ್ಯ || 3 || 269 ||

**ಭಾಮಿನಿ**
ಪಡೆದನೆಂದುದ ಕೇಳ್ದು ವಿಪ್ರನ |
ಪಿಡಿದು ತಹೆ ತಾನೆನುತ ಬೆನ್ನ |
ತ್ತೊಡನೆ ಬಹುದೀಕ್ಷಿಸುತಲಾ ಕಾಪಟ್ಯಭೂಸುರನು ||
ತಡೆಯದೋಡುವ ಭರಕೆ ಭೂತಳ |
ಒಡನೆ ಕಂಪಿಸೆ ಪರ್ವತಂಗಳು |
ಸಿಡಿವುದೆನಲ್ಪರಿತಹನ ಪಥಕಡ್ಡಯಿಸಿ ಪದಕೆರಗಿ || 1 || 270 ||

**ಕಂದ**
ಕೈವಿಡಿದಾಭೂಸುರನಂ |
ಮೈದಡವರಿಸುತ ಸಂತಸಗೊಳಿಸುತ ಭರದಿಂ ||
ವೈನದಿ ಪಿತನಿದ್ದೆಡೆಗಂ |
ಗೈಸಲ್ ಸೀಳ್ದಲೆಯಿಂ ಭೂಪತಿ ಬುಧಗೆಂದಂ || 1 || 271 ||

**ನೀಲಾಂಬರಿ - ಝಂಪೆ**
ಮುನಿಪ ಬಾರಯ್ಯ | ಮುನಿವರೇನಯ್ಯ ||
ಎನುವೆ ಎನ್ನಯ | ಮನದ ಚಿಂತೆಯ || 1 ||

ತನುವಿನಾಸೆಗೆ | ತಾನು ಕೂಗಿದೆ ||
ಯೆನುತ ಯೋಚನೆ | ನೀನು ಮಾಡದೆ || 2 ||

ಅತ್ತುದಲ್ಲಿದು | ದಕ್ಷಿಣಾಂಗವು |
ಇತ್ತು ನಿನ್ನಿಂದ | ಸಫಲವಾಯಿತು || 3 ||

ಮತ್ತೀ ದೇಹದ | ವಾಮಭಾಗವು ||
ವ್ಯರ್ಥವಾಯಿತು | ಎಂಬ ಶೋಕವು || 4 ||

ಚಿತ್ತಕಾದುದು | ಸತ್ಯ ನೋಡಿದು ||
ಮತ್ತು ಸಂಶಯ | ಮಾಡಬೇಡಯ್ಯ || 5 ||

ಇತ್ತ ದಾನವ | ಕೊಳ್ವುದೆನುತಲಿ ||
ಪೃಥ್ವಿಪಾಲನು | ಪೇಳಲಾತನು || 6 || 277 ||

**ವಾರ್ಧಕ**
ಮೆಚ್ಚಿದಂ ನೃಪನೆಂದ ಮಾತಿಗೆ ಮುರಧ್ವಂಸಿ |
ಹಚ್ಚಿರ್ದ ರಾಯನ ಕಳೇಬರದ ಪೋಳ್ಗಳಂ |
ಬೆಚ್ಚುತ ಕಾರಣ್ಯದಿಂ ಮೈದಡವಿ ತಕ್ಕೈಸಿ ನಿನ್ನಂ ಪರೀಕ್ಷಿಸಿದೆನು ||
ನಿಚ್ಚಟದ ಭಕ್ತಿಯಂ ಕಂಡೆನಿವನರ್ಜುನಂ |
ಮುಚ್ಚುಮರೆಯೇಕಿನ್ನು ತಾನೀಗ ಕೃಷ್ಣನೆಂ |
ದೆಚ್ಚರಿಸಿ ನಿಗಮದರಿಕೆಯ ತನ್ನ ಸಾಕಾರ ಮೂರ್ತಿಯಂ ತೋರಿಸಿದನು || 1 || 278 ||

**ಕಲ್ಯಾಣಿ - ಝಂಪೆ**
ಈಕ್ಷಿಸಿದ ಮನದಣಿಯೆ | ಮೋಕ್ಷಸಾಧಕನ ||
ಪಕ್ಷಿವಾಹನ ಚೆಲ್ವ | ಲಕ್ಷ್ಮೀವಲ್ಲಭನ || ಪ ||
ಸುರನರೋರಗರಿಂದ | ನಿರತ ಪೂಜೆಯ ಕೊಂಬ |
ವರ ತ್ರಿವಿಕ್ರಮ ವಿಶ್ವ | ಲೋಕೇಶನ ||
ಶರಧಿತನುಜೆಯ ಲೋಲ | ವರಮೌನಿ ಜನಪಾಲ |
ಕರುಣನಿಧಿ ಪಾಂಡು ರಂ | ಗನ ಮೂರ್ತಿಯ || 1 ||

ವರ ವಿಭೀಷಣ ಭೀಷ್ಮ |ತರುಣ ಪ್ರಹ್ಲಾದ ಧ್ರುವ |
ವರರುಕ್ಮಾಂಗದನಂಬ | ರೀಷಾದ್ಯರ ||
ಹರಿಶ್ಚಂದ್ರ ನಳಚಕ್ರ | ವರ್ತಿ ಬಲಿಮುಖ್ಯರಿಗೆ |
ಪರಮ ಸತ್ಕೃಪೆಯಿಂದ | ಲೊಲಿದ ಮೂರುತಿಯ || 2 ||

ಕಮಲನಾಭನ ದಿವ್ಯ | ವಿಮಲ ಮೂರುತಿಯ ಹೃತ್ |
ಕಮಲಮಧ್ಯದಿ ತಾನು | ನೆಲೆಗೊಳಿಸುತ ||
ಸುಮನಸರು ಮೆಚ್ಚುವಂ | ತಮಿತ ವೈಭವದಿಂದ |
ರಮೆಯರಸಗರ್ಚಿಸುತ | ಸ್ತುತಿಗೆಯ್ದನು || 3 || 281 ||

**ವಾರ್ಧಕ**

ಜಯ ಜಯ ಜಗನ್ನಾಥ ವರಸುಪರ್ಣವರೂಥ |
ಜಯ ಜಯ ರಮಾಕಾಂತ ಶಮಿತದುರಿತಧ್ವಾಂತ |
ಜಯ ಜಯ ಸುರಾಧೀಶ ನಿಗಮನಿರ್ಮಲಕೇಶ ಕೋಟಿಸೂರ್ಯಪ್ರಕಾಶ ||
ಜಯ ಜಯ ಕ್ರತುಪಾಲ ತರುಣತುಳಸೀಮಾಲ |
ಜಯ ಜಯಾಕ್ಷ್ಮಾಪೇಂದ್ರ ಸಕಲಸದ್ಗುಣಸಾಂದ್ರ |
ಜಯತು ಜಯ ಯದುರಾಜ ಭಕ್ತ ಸುಮನಸಭೂಜ ಜಯತು ಜಯ ಎನುತಿರ್ದನು || 1 || 282 ||

**ಭಾಮಿನಿ**

ಇಂತು ಸತಿಸುತಸಹಿತಲಾ ನಗ |
ರಾಂತರದ ಜನಜಾಲವೆರದು ಮ |
ಹಾಂತಭೂಸುರವರರನೊಡಗೊಂಡಾ ಶಿಖಿಧ್ವಜನು ||
ಚಿಂತೆರಹಿತನನರ್ಚಿಸುತಲತಿ |
ಸಂತಸದಿ ಸ್ತುತಿಗೆಯ್ದು ಪಾದಾ |
ಕ್ರಾಂತನಾಗಲು ಭೂಪನೆತ್ತುತಲೆಂದ ಸರ್ವೇಶ || 1 || 283 ||

**ನವರೋಜು - ಏಕ**

ಪೊಡವಿಪಾಲಕ ಕೇಳು | ತವ |
ದೃಢಕೆ ಮೆಚ್ಚಿದೆನೇಳು ||
ನುಡಿಗೆಡರಿಲ್ಲೆಂ | ದೊಡನೀ ದೇಹವ |
ತಡೆಯದೆ ಸೀಳಿಸಿ | ಕೊಡುವವರಾರೈ || 1 ||

ಚಿಕ್ಕವನಲ್ಲಿವ ಶೂರ | ಮಗ |
ದಕ್ಕನು ಯಾರಿಗು ಧೀರ ||
ಮಿಕ್ಕ ಮಾತೇನೆಮ್ಮ | ಸೊಕ್ಕನು ನಿಲ್ಲಿಸಿ |
ಘಕ್ಕನೆ ಸಮರದಿ | ಧಿಕ್ಕರಿಸಿದನಿವ || 2 ||

ಮುಂದೀಯಶ್ವಗಳೆರಡು | ಸಹ |
ಚಂದದಿ ಯಾಗವ ಮಾಡು ||
ನಂದನ ಸತಿ ಬುಧ | ವೃಂದವು ಸಹಿತಾ |
ನಂದದಿ ಬಾಳಿರು | ಯೆಂದೆನಲರುಹಿದ || 3 || 286 ||

**ಸೌರಾಷ್ಟ್ರ - ಆದಿ**

ಸ್ವಾಮಿ ಲಾಲಿಸು ಭಕ್ತ | ಪ್ರೇಮಿ ಪಾವನ ಪುಣ್ಯ |
ನಾಮ ಸಜ್ಜನ ಸಾಧುಸಾಂದ್ರ ||
ಕೋಮಲಾಮಲಕಾಯ | ಕಾಮಿತಜನಪ್ರಿಯ |
ಮಾಮನೋಹರ ಯಾದವೇಂದ್ರ || 1 ||

ರಣದೊಳಗಣುಗನು | ಸೆಣಸಿದನೆನುತವ |
ಗುಣಗಳು ಮನಸಿನೊಳಿಡದೆ ||
ಅಣುಮಹಾತ್ಮನೆ ಪರಿ | ಪೂರ್ಣ ಕಟಾಕ್ಷದಿ |
ಘನಮಹಿಮನೆ ನೀ ಕಾಯೊ || 2 ||

ಹರಿ ಸರ್ವೋತ್ತಮ ನಿನ್ನ | ಕರುಣವೊಂದಿದ್ದರೆ |
ತುರಗವು ಮಖಗಳಿನ್ನೇಕೆ ||
ಧರಣಿಪ ಧರ್ಮಜ | ಗಿರದೆ ಒಪ್ಪಿಸುವೆನು |
ನಿರತ ಯಾಗವ ಗೆಯ್ಯಲಿನ್ನು || 3 || 289 ||

**ವಾರ್ಧಕ**

ಸುರನದಿಯ ತೋಯಮಿರೆ ನೀರಡಸಿ ಹಿಮಜಲಕೆ |
ಪರಿವಂತೆ ನಿನ್ನ ದರ್ಶನಮಿರ್ದು ಈ ಮಹಾ |
ಧ್ವರಕೆಳಸುವವನಲ್ಲ ತನ್ನನುಂ ತನ್ನ ಸತಿ ಸುತರನುಂ ತನ್ನೊಳಿರ್ದ ||
ತುರಗಂಗಳಂ ತನ್ನ ಯಜ್ಞಮಂ ಯಜ್ಞೋಪ |
ಕರಣಂಗಳಂ ತನ್ನ ರಾಜ್ಯಮಂ ತನ್ನ ಮಂ |
ದಿರದ ಸರ್ವಸ್ವಮಂ ನಿನ್ನ ಪದಕರ್ಪಿಸಿದೆನೆಂದವಂ ಕೈ ಮುಗಿದನು || 1 || 290 ||

**ಭಾಮಿನಿ**

ಇಂತೆನಲು ಆಶ್ರಿತನ ದೃಢವನು |
ಕಂತುಪಿತನರ್ಜುನಗೆ ತೋರಿಸಿ |
ಸಂತಸದಿ ಮೂರ್ದಿವಸವಲ್ಲಿರ್ದಧಿಕ ವಸ್ತುಗಳ ||
ದಂತಿನಗರಕೆ ಕಳುಹಿ ಮಾರ್ಬಲ |
ಪಿಂತೆರಡು ಹಯಗೊಂಡು ಪಾರ್ಥನ |
ನಂತಶಯನನು ಸಹಿತ ಮುಂದಯ್ದಿದರು ಉತ್ಸವದಿ || 1 || 291 ||

**ಸೌರಾಷ್ಟ್ರ - ತ್ರಿವುಡೆ**

ಕೇಳು ಜನಮೇಜಯನೆ ಲಕ್ಷ್ಮೀ |
ಲೋಲ ತತ್ಪುರಜನರ ಮನ್ನಿಸಿ |
ಶೀಲಶಿಖಿಧ್ವಜ ನೃಪನ ಪಡೆಸಹ | ಮೇಳವಿಸಿತು || 1 ||

ಚಾರುತರದುಭಯಶ್ವಗಳು ಮಿಗೆ |
ಮೂರನೆಯ ಪಾಂಡವಸಹಿತ ರಥ |
ವೇರಿ ಬರೆ ಬೆಚ್ಚಿದುದು ಬಳಿಕೀ | ಯಾರುಭಟೆಗೆ || 2 ||

ಮೊರೆವ ಘನ ನಿಸ್ಸಾಳದದುಭುತ |
ದುರು ಮಹಾರವದಿಂದ ಪರ್ವತ |
ಜರಿಯಲೆಂದಯ್ದಿತು ಬಲೌಘವು | ಶರಧಿಯಂತೆ || 3 || 294 ||

**ದ್ವಿಪದಿ**

ಧಾರಿಣೀಪತಿ ಲಾಲಿಸಿಂತು ಫಲುಗುಣನು |
ಚಾರುಪಡೆಯೊಡಗೊಂಡು ಸಕಲ ದೇಶವನು || 1 ||

ತೊಳಲಿ ನಿಖಿಳಾವನೀಶ್ವರರನುರೆ ಝಡಿದು |
ಬಳಲಿಸಿಯೆ ಸರ್ವವಸ್ತುಗಳ ನೆರೆಪಡೆದು || 2 ||

ಬರಬರಲು ಮುಂದೆ ಸಾರಸ್ವತಾಯೆಂಬ |
ಪುರವನೀಕ್ಷಿಸುತರುಹಿದುದು ಬಲಕದಂಬ || 3 ||

ಪರಿವಿಚಿತ್ರದಿ ಶೋಭಿಸುವ ನಗರಸಿರಿಗೆ |
ಅರಸನಾಗಿಹ ವೀರವರ್ಮನೆಂಬವಗೆ || 4 ||

ಸುಲಭನುನ್ನತ ಕುಲಸುಪಾಲರೆಂದೆನಿಪ |
ಸಲೆ ಸುತರು ಸುತೆ ಮಾಲಿನಿಯಳನಾ ಮಹಿಪ || 5 ||

ಜವನಿಗೊಲಿದೀಯಲವ ಮನೆಯಳಿಯನಾಗಿ |
ತವೆಸುಖದೊಳಿರ್ದ ನೃಪ ಹರಿಶರಣನಾಗಿ || 6 ||

ಈ ಪರಿಯೊಳಿರುವ  ನೃಪವರ ನಂದನದೊಳು |
ಶ್ರೀಪತಿಯ ನೇಮದಲಿ ಬಿಟ್ಟರಶ್ವಗಳು || 7 || 301 ||

**ಭಾಮಿನಿ**
ಕ್ಷತ್ರಿಕುಲಕಮಲಾರ್ಕ ತೇಜೋ |
ರತ್ನ ಕೇಳಿಂತಾಗ ವನದಿ ವಿ |
ಚಿತ್ರದಿಂದಯ್ತರುತಲಿಹ  ಕುದುರೆಗಳ ಬೆಂಗಡೆಯ ||
ಗೋತ್ರರಿಪುನಂದನನ ಪಡೆ  ವಸು |
ಧಾತ್ರಿ ನಡುಗುವ ತೆರದಿ ಗರ್ಜಿಸೆ |
ನೇತ್ರದಿಂದೀಕ್ಷಿಸುತ ಪುರಪಾಲಕರು ಕಳವಳಿಸೆ || 1 || 302 ||

**ಆರ್ಯಸವಾಯ್ - ಏಕ**
ನಡುಗುತ ಬೇಗದೊಳಯ್ತಂದಾಳಿದ |
ನಡಿಗೆರಗುತಲತಿ ವಿನಯದೊಳಂ ||
ತಡೆಯದೆ ಪಾಂಡವಬಲದುನ್ನತಿಕೆಯ |
ಬಿಡದುಸಿರಿದರಾಗಳೆ ಭಯದಿಂ || 1 || 303 ||

**ಪೂರ್ವಿ - ಅಷ್ಟ**
ಲಾಲಿಸು ಪೃಥ್ವೀಪಾಲಕ ಬಿನ್ನಹ |
ಕೇಳು ಕಟಾಕ್ಷದೊಳೀಗ ||
ಪೇಳುವುದೇನೆಮ್ಮಾಲಯದೊಳು ರಿಪು |
ದಾಳಿಯ ಬಿಟ್ಟರು ಬೇಗ || 1 ||

ಮುಂಗಡೆಯೊಳು ಬಹ ಭೂಪನ ಸಾರಥಿ |
ಯಂಗವು ಕಪ್ಪೆಸಗಿಹವು ||
ತುಂಗಬಲಾಢ್ಯನ ತೇರಿನ ತುದಿಯಲಿ |
ಮಂಗನ ಕುಳ್ಳಿರಿಸಿಹರು || 2 ||

ಚಿಕ್ಕವನೋರ್ವನ ರಥದಾ ಶಿಖರದಿ |
ಸಿಕ್ಕಿಸಿ ಹರುಷದಿ ಎಳೆಮೀನ ||
ಮಿಕ್ಕವರೆಲ್ಲರ ರಥದ ಮೇಲ್ನಿಲಿಸಿಹ |
ಹಕ್ಕಿಯ ಬಳಗದವರನ್ನ ||  3 ||

ಮಿಂಚಿನ ಮರಿಯಂತೆ ತೊಳಲುತ ತುರಗಗಳ್ |
ಪಂಚವರ್ಣದ ರೇಖೆಗಳು ||
ವಂಚನೆಯಿಲ್ಲದೆ ಹಣೆಯೊಳು ಕಟ್ಟಿದೆ  |
ಮಿಂಚುವುದೋದೀಲಿಖಿತಗಳು || 4 ||

ಶೃಂಗಾರಗಳನೇನೆಂಬೆನು ಸ್ವಾರಿಯ |
ಭಂಗಾರದಿ ಮುಚ್ಚಿದರು ||
ವಿಂಗಡದಲಿ ರಥರಥಿಕರ ನೋಡಲು |
ಅಂಗಜನಂದದೊಳಿಹರು || 5 ||

ಕೆಡಿಸುತಿದೆಮ್ಮ ನೃಪವನವೆನುತಶ್ವವ |
ಹಿಡಿಯಲಯ್ದಿದರೆ ನಮಗಲ್ಲಿ ||
ಹೊಡೆಯಲಿಕಯ್ದುಹರೆಂದಾ ದೂತರ |
ನುಡಿಯ ಲಾಲಿಸಿ ಕೇಳುತಲಿ || 6 || 309 ||

**ಭಾಮಿನಿ**
ಚಾರಕರ ನುಡಿಯಾಲಿಸುತ ನರ |
ನಾರಯಣರುಗಳೊಡನೆ ತನಗೀ |
ಬಾರಿಯಂಕವು ದೊರೆಯುವುದು ಹಯ ತನ್ನಿರೆನೆ ಕೇಳ್ದು ||
ಭೋರನಶ್ವಗಳ್ತರುತಲಣುಗರು |
ವೀರವರ್ಮನ ಮುಂದೆ ನಿಲಿಸಲು |
ಚಾರುಲಿಖಿತವನೋದಿ ಕೇಳುತಲಾಗ ಕಳವಳಿಸಿ || 1 || 310 ||

**ಸಾರಂಗ - ಅಷ್ಟ**
ಮಗನೆ ಸುಲಭ ನೀ ಕೇಳು | ದೇವೇಂದ್ರನ |
ಮಗನು ಬಂದಿಹ ನಮ್ಮೊಳು ||
ಜಗದೊಳು ಪ್ರಬಲರೆಂ | ಬಗಡುಗಳೆಲ್ಲರ |
ಮಿಗೆ ಗರ್ವ ಮುರಿವೆನ | ಶ್ವಗಳತ್ತ ಕಟ್ಟಿಸು || 1 ||

ಪಡೆಸಹ ಪೋಗು ನೀನು | ಮುಂದ್ವಳಚು ಬೆಂ |
ಗಡೆಯೊಳು ಬಹೆನು ನಾನು ||
ಹೊಡೆದಟ್ಟು ರಿಪುಗಳೆಂ | ದೊಡನೆ ನೇಮಿಸಲಾಗ |
ತಡೆಯದೆ ಸಹಜವೆಂ | ದೊಡನೆ ನಂದನನಾಗ || 2 ||

ಸೇನೆಗೊಂಡುತ್ಸಹದಿ | ಪಾರ್ಥನ ಕೂಡೆ |
ತಾನೆ ಕಾದಲು ಮುದದಿ ||
ತ್ರಾಣದೊಳಯ್ತರೆ | ಕಾಣುತ್ತ ಬಲವು ಮುಂ |
ದೂಣೆಯೊಳೆಣಗಿದರ್ | ಬಾಣಂಗಳೆಸೆವುತ || 3 || 313 ||

**ವಾರ್ಧಕ**
ಮೋಹರದ ಮುಂದೆ ನಡೆತರುತಿರ್ದ ಕಲಿ ಬಭ್ರು |
ವಾಹನಂ ಕೇಳ್ದು ಕಡು ಕೋಪದಿಂದೊದಗಿ ಬಂ |
ದಾಹವಕೆ ಶಂಖನಾದಂ ಗೆಯ್ಯೆ ಬೆದರಿತು ಜಗತ್ರಯಂ ಪರಬಲದೊಳು ||
ಸಾಹಸಿಗರುಡುಗಿದರ್ ಬಳಿಕೆರಡು ಚೂಣಿಗಳ |
ಕಾಹುಗಳ ಕಲಿಗಳೊಡೆವೆರಸಿ ಹೊಯ್ದಾಡಿದರ್ |
ಬಾಹು ನಖ ಮುಷ್ಟಿ ಕೇಶಾಕೇಶಿ ಮಲ್ಲಯುದ್ಧದ ಹತಾಹತಿಗಳಿಂದ || 1 || 314 ||

**ಕಂದ**
ಪಡೆಯಂ ಸವರುತಲಯ್ತರ |
ಲೊಡನಾ ಮಣಿಪುರಧೀಶನು ಈಕ್ಷಿಸಿ ಭರದಿಂ ||
ಕಡು ರೌದ್ರದಿ ಚಾಪವ ಕೊಂ |
ಡೊಡನಾ ಸುಲಭನು ಶರಗಳ ತುಡುಕುತಲೆಂದಂ || 1 || 315 ||

**ಶಂಕರಾಭರಣ - ಮಟ್ಟೆ**
ನಿಲ್ಲು ನಿಲ್ಲೆಲೊ | ಬಭ್ರುವಾಹನ |
ಸಲ್ಲದೀಗ ಗರ್ವವಿನಿತು | ಬಲ್ಲೆ ಕೇಳೆಲೊ || 1 ||

ಪಿತನ ರಣದೊಳು | ಹತಿಸಿ ನಮ್ಮೊಳು |
ಖತಿಗೆ ಬಂದೆ ಶೌರ್ಯನೆನುತ | ಲತುಳಬಲದೊಳು || 2 ||

ಇಡಲು ಗದೆಯನು | ಫಣಿಯ ಮೊಮ್ಮನು |
ನಡುವೆ ತರಿಯುತೆಚ್ಚ ಶರಗ | ಳೊಡನೆ ಪೇಳ್ದನು || 3 ||

ತರಳತನದಲಿ | ಬಗುಳಿ ರಣದಲಿ |
ಹರಣವೀಯಬೇಡ ಮರುಳೆ | ಯೆನುತ ಪಿಂಗಳಿ || 4 ||

ಚರಿಸಿ ಪಿತನನು | ಕಳುಹಿರೆನುತಲಿ |
ಉರಿಯುವಸ್ತ್ರ ಕಡಿದ ನಡುವೆ | ಬಲುಹಿನಿಂದಲಿ || 5 || 320 ||

**ವಾರ್ಧಕ**
ಬಳಿಕೆರಡು ಕಡೆಯ ಭಟರುಬ್ಬುಟದೊಳಬ್ಬರದೊಳ್ |
ಹಳಚಿ ಹೊಯ್ದಾಡುತಿರಲಾಚೆಯಿಂದೀಚೆಯಿಂ |
ತಳತಂತ್ರದೊಡನೊಡನೆ ಮಗ್ಗಿದುದು ಮುಗ್ಗಿದುದು ಬಹಳ ಕೋಲಾಹಲದೊಳು ||
ಛಿಳಿಛಿಠಿಲ್ ಛಿಠಿಲೆಂಬ ರವದಿಂದ ಜವದಿಂದ |
ಕಳಿವರಿದು ಘೋರಪ್ರಹಾರದಿಂ ವೀರದಿಂ |
ಬಳಸಿ ಬಿದ್ದುದು ಮಂದಿ ಹೆಣಮಯದ ರಣಮಯದ ರವುಕುಳದ ರಚನೆ ಮೆರೆಯೆ || 1 || 321 ||

**ಭಾಮಿನಿ**
ಧುರದೊಳೀಪರಿಯಿಂದ ಹೆಣಗುತ |
ತರಳರಸದಳರಾಗಿ ಪಿಂದಕೆ |
ಸರಿಯಲೀಕ್ಷಿಸಿ ಪಂಥವಳಿದುದುಯೆನುತ ತೀವ್ರದಲಿ ||
ಕರಿತುರಗ ರಥ ಮಾರ್ಬಲವ ಕೊಂ|
ಡುರುಪರಾಕ್ರಮಿಯಂತಕನ ತಾ |
ನೆರವಿಗೊಂಡಾ ಹವಕೆ ನಡೆತಂದಳಿಯಗಿಂತೆಂದ || 1 || 322 ||

**ಕಾಂಭೋದಿ - ಏಕ**
ಕೇಳಯ್ಯ ನಾವೆಂಬ ನುಡಿಯ | ಯಮದೇವ || ಪಾಂಡು |
ಬಾಲ ಸವ್ಯಸಾಚಿಯಂತೆ | ಯಮದೇವ || 1 ||

ಹರಿಸಹಾಯವಂತೆಯವಗೆ | ಯಮದೇವ || ನಮ್ಮ |
ಪುರಕೀಗಶ್ವ ಬಿಟ್ಟರ್ ಧುರಕೆ | ಯಮದೇವ || 2 ||

ತರಳರನ್ನು ಗೆಲಿದಿನ್ನವರು | ಯಮದೇವ || ಮುಂದು |
ವರಿವರಿಲ್ಲೈ ಬಲವು ಸಹಿತ | ಯಮದೇವ || 3 ||

ಅಳಿಯ ನೀನಿಂದೆನ್ನ ಮಾನ | ಯಮದೇವ || ಈಗ |
ಉಳಿಸಿ ಬೇಗ ಕಾಯಬೇಕೈ | ಯಮದೇವ || 4 || 326 ||

**ಭಾಮಿನಿ**
ಶ್ವಶುರನೀಪರಿಯಿಂದ ಕೃಪೆಯೊಳ |
ಗುಸಿರಲಪ್ಪುತ ಧೈರ್ಯನಾಗೈ |
ಪಿಸುಣರನು ಲೆಕ್ಕಿಸದೆ ಒಂದೇ ನಿಮಿಷ ಮಾತ್ರದಲಿ ||
ಹಸಗೆಡಿಸುವೆನು ಎನುತ ಬೇಗದಿ |
ಬಿಸಜಸಖನಾತ್ಮಜನು ಧನುವನು |
ವಸದು ತೆಬ್ಬೇರಿಸುತಲಾಹವಕಯ್ದನುಗ್ರದಲಿ || 1 || 327 ||

**ಅಹೇರಿ - ಝಂಪೆ**
ಬವರಕಯ್ತಂದನಾಗ | ರಿಪುಬಲವ |
ಸವರಲೆಂದೆನುತ ಜವದೇವನತಿ ಬೇಗ ||
ಬವರಕಯ್ತಂದನಾಗ || ಪ ||
ಕರಿ ತುರಗ ರಥ ಪದಾತಿಗಳೆಲ್ಲ ಮುಗಿದು ಪದ |
ಚರರ ಸಂದೋಹ ಧರೆಗುರುಳಿಸುತ ಮಾರ್ಬಲವ |
ಹುರುಳುಗೆಡಿಸುತ ಕಿಚ್ಚಿನಂತೆ ಕೋಲ್ಗರೆದು ಮುಂ |
ದರಿದು ರಿಪುಬಲಕಂಗವನು ಕಾಣಿಸದೆ |
ಮೆರೆದನೀಪರಿಯೊಳಾ ಧುರದೊಳರ್ಕಜನು || 1 ||

ಕಾಮನನಿರುದ್ಧ ವೃಷಕೇತು ಯವನಾಶ್ವನಂ |
ಭೀಮವಿಕ್ರಮ ಸಾಲ್ವ ಮಣಿಪುರಾಧಿಪ ಸಾಂಬ |
ಆ ಮಹಾ ಕೃತವರ್ಮ ಮುಖ್ಯ ಮಾರ್ಬಲದ ಭಟ |
ಸ್ತೋಮ ಕಳವಳಗೊಳುತ ಅಳವಿಯೊಳು ಕಂಗೆಡುತ |
ಕಾರ್ಮುಕಕೆ ನಿಲ್ಲದಂದೋಡುತಿರಲಂದು || ಬವರಕಯ್ತಂದನಾಗ || 2 || 329 ||

**ಭಾಮಿನಿ**
ಭುವನಪತಿ ನೀ ಕೇಳು ಮುನ್ನವೆ |
ಭುವನಜೀವರ ಕೊಲುವನಂತಕ |
ಕವಿವ ಮಾರಿಗೆ ಕುರಿಯು ಸಿಕ್ಕಿದ ತೆರದಿ ಬಲವಾಯ್ತು ||
ಬವರದೊಳು ತನ್ನವರ ಮುರಿದರು |
ಕವಿವರಿದಿರಿನೊಳಾರು ಕಾಣದೆ |
ದಿವಿಜಪತಿಯಾತ್ಮಜನು ಚೋದ್ಯದಿ ಹರಿಯೊಳಿಂತೆಂದ || 1 || 330 ||

**ಶಂಕರಾಭರಣ - ಆದಿ**
ಲಾಲಿಸು ಸಂತತ | ಬಾಲಮುಕುಂದ ||
ಶೀಲ ಸದಾಲಕ್ಷ್ಮೀ | ಲೋಲ ಗೋವಿಂದ || ಲಾಲಿಸು || ಪ ||
ಅರಿವ ಧರಣಿಪ | ನಾರೊಡೆಯರು ಭಟ |
ವೀರರ ಕಾಣೆನ | ಪಾರ ವಿಕ್ರಮನು || 1 ||

ಹಳಚದೆ ನಮ್ಮವ | ರಳುಕುತ ಪಿಂದಕೆ |
ಚಲಿಸಿದರೇನಿಂತ | ಕಲಿತನವೆಂಬುದ || 2 ||

ಅರಿಯೆವು ತಾನಯ್ದ | ಶರ ಕವಿಯುತಲಿದೆ |
ಅರಿಭಟನಿದಿರಿಲ್ಲ | ಅರಿವೆ ನೀನಿದನೆಲ್ಲ || 3 ||

ತಿಳಿಸಿದೆ ನಾನಿದ | ಪಾಲಿಸು ತನಗೆಂದು |
ಕಲಿನರ ಕೇಳಲು | ಪೇಳಿದ ಕೃಪೆಯೊಳು || 4 || 334 ||

**ಶಂಕರಾಭರಣ - ಏಕ**
ಕೇಳಿದೆಯ | ಜಿಷ್ಣು | ಕೇಳಿದೆಯ || ನಿನ್ನ |
ತೋಳಬಲುಹು ಕೊಳ್ಳದೀ ಭೂ |
ಪಾಲನಾದಿ ವೃತ್ತಾಂತವ || ಕೇಳಿದೆಯ || ಪ ||
ವೀರವರ್ಮಕ ನೃಪಾಲ | ವೀರ ವೈಷ್ಣವ ಸುಶೀಲ |
ಶೂರಂಗಯ್ವರಣುಗರು ಕು | ಮಾರಿಯೋರ್ವಳು ||
ಧಾರಿಣಿಗಧಿಕೆಯಾಗಿ | ತೋರುವಳತಿ ರೂಪೆಯಾಗಿ |
ವಾರಿಜಾಕ್ಷಿ ಪತಿವ್ರತೆ | ಚಾರುಗುಣಯುತೆ ವಿಖ್ಯಾತೆ || ಕೇಳಿದೆಯ || 1 ||

ಕ್ಷೀಣಾಯುಷ್ಯರ್ಧರೆಯ ಜನರ | ರಾಣಿತ್ವವನೊಲ್ಲೆನೆನುತ |
ತಾನೆ ಭಜಿಸಿಯೊಲಿಸಿಕೊಂಡಳ್ | ಕೋಣವಾಹನ ||
ಜಾಣೆಯರಸಿಯಾಗಲವಳ | ಕಾಣುತ್ತ ನಿನ್ನಣ್ಣನಯ್ಯ |
ತಾನೆ ಭ್ರಮಿಸಿಕೊಂಡಲ್ಲಿಹನು | ಕ್ಷೋಣಿಪನಿಂಗಳಿಯನಾಗಿ || ಕೇಳಿದೆಯ || 2 ||

ಸೇರಿ ಮಾವನನುಳಿಸಲೆಂದು | ಚಾರು ದೇಹ ತೋರದಿಂದು |
ಭೂರಿರಣವ ಗೆಯ್ವನವನ | ಕಾರಿಯವಿದು ||
ಧಾರಿಣಿಯ ಜನರು ಇವನೊಳ್ | ಮೀರಿ ಸೆಣಸಿ ಜೀವಿಪರೆ ಅ |
ಪಾರಶೌರ್ಯವಂತನೆನುತ | ವಾರಿಜಾಕ್ಷನೊಲಿದಿಂತೆಂದ || ಕೇಳಿದೆಯ || 3 || 337 ||

**ಭಾಮಿನಿ**
ಇಲ್ಲಿವನೊಳೇಕೆ ಹೆಣಗುವುದು ತರ |
ವಲ್ಲ ನಡೆಯೀವೀರವರ್ಮಕ |
ನಲ್ಲಿ ತೋರಿಸಬಹುದು ಭುಜಬಲವೆನುತ ಮಾಕಾಂತ ||
ಬಲ್ಲಿದನು ಹಯವಾಘೆಯನು ಕೈ |
ಗೊಳ್ಳುತತಿ ವೇಗದಲಿ ರಿಪುವಿದಿ |
ರಲ್ಲಿ ರಥವಯ್ದಿಸಲು ನೃಪ ಕಂಡೆಂದ ಪಾರ್ಥನೊಳು || 1 || 338 ||

**ಶಂಕರಾಭರಣ - ಮಟ್ಟೆ**
ನೀನೆ ಪಾಂಡುತರಳ ಪಾರ್ಥ | ಜಾಣ ಮೂರುಲೋಕದೊಳಗೆ |
ತ್ರಾಣಿಯೆಂಬ ಗರ್ವವೀಗ | ಕಾಣಿಸೆನ್ನೊಳು ||
ಆನಲಿದಿರು ಕೃಷ್ಣನೋರ್ವ | ವಾನರೇಶ ನೀನು ಹೊರತು |
ಕಾನನಾದ ತೆರದಿ ಬಲವಿ | ದೇನು ಗಣ್ಯವು || 1 ||

ಹರಿಸಹಾಯದಿಂದ ನೀನು | ಧರೆಯನೆಲ್ಲ ಗೆಲಿದೆನೆಂಬ |
ಭರಿತ ಶೌರ್ಯ ತೋರೆನುತ್ತ | ಶರವ ಮಂತ್ರಿಸಿ ||
ಹರಿಸಲಾಗ ನರನು ಕಂಗೆ | ಟ್ಟಿರದೆ ಹಯಗಳ್ ಧಾತುಗೆಡಲು |
ಹರಿಯ ವಾಘೆ ಸಡಲೆ ಪ | ಲ್ಗಿರಿದ ಹನುಮನು || 2 ||

ಬಳಿಕ ವಿಜಯ ನುಡಿದ ನಿ | ನ್ನಳಿಯ ಜವನುಯೆಂಬ ಬಲವು |
ತಿಳಿಸಲೆಂದು ತುರಗ ಕಟ್ಟಿ | ಕಲಹ ಗೆಯ್ವೆಯ ||
ಛಲವ ಬಿಟ್ಟು ಹಯಗಳಿತ್ತು | ಗೆಲವಿನಿಂದ ಬಾಳೆನುತ್ತ |
ತಳುವದೆಚ್ಚನಾಗ ಶರದ | ಮಳೆಯ ಕಾಣುತ || 3 ||

ಕತ್ತರಿಸುತಲೆಂದನೆಲವೊ | ಕ್ಷತ್ರಿಯಾಗಿ ಸಮರವೀಯ |
ದಿತ್ತಲೀಗ ಹಯವ ಕೇಳ್ವೆ | ಸ್ತೋತ್ರದಿಂದಲಿ ||
ವ್ಯರ್ಥ ಕಾದಲೇಕೆ ಹಯವ | ನಿತ್ತು ಕಳುಹು ಯೆನದೆ ಮೊದಲೆ |
ಚಿತ್ರಭ್ರಮಣನೆನುತ ಶರದ | ಮೊತ್ತ ಕರೆಯಲು || 4 || 342 ||

**ವಾರ್ಧಕ**
ಅಭ್ರದೊಳ್ ಮಿಂಚು ಸುಳಿವಂತೆ ಪರಬಲದೊಳ್ ಪ |
ರಿಭ್ರಮಿಸಿತವನ ರಥವೆರಗುತಿಹ ಸಿಡಿಲಂತೆ |
ವಿಭ್ರಾಜಿಸಿತು ಘೋಷಮೊಡನೆ ಬಿರುಮಳೆಯಂತೆ ಕರೆದರಂಬಿನ ಸರಳ್ಗಳು ||
ಬಭ್ರುವಾಹನ ಮಯೂರಧ್ವಜಾದಿಗಳಹ |
ವಭ್ರುಷ್ಟರಾದರಿದಕರ್ಜುನಂ ರೋಷಬ |
ದ್ಧ ಭ್ರುಕುಟಮುಖ ಭಯಂಕರ ಮಾಗಲಸುರಾರಿ ಕಂಡು ಬಳಿಕಿಂತೆಂದನು || 1 || 343 ||

**ಭೈರವಿ - ಆದಿ**
ಏಸು ಧೈರ್ಯವೊ | ಅರ್ಜುನ ನೋಡಿ |
ನ್ನೇಸು ಶೌರ್ಯವೊ || ಪ ||
ಏಸು ವೇಗ ಧನುವಿಗಂಬ | ನಾ ಸಮರ್ಥನಿಡುವನೊ ||
ಈಸುಭಟರಿಗೆಲ್ಲನೋರ್ವ | ಮೀಸೆ ಮತ್ತು ಕಡಿವನು |
ದೇಶದರಸರಿಂಗೆ ಬರಿದೆ | ಗಾಸಿ ಮಾಡಿ ಕೊಲುವನು ||
ಏಸು ಧೈರ್ಯವೊ || ಅ.ಪ ||
ಕಾಕುಭಟನೆ ರಣದೊಳು ಪಿ | ನಾಕಿಗಳುಕನೀತನು |
ಯಾಕೀಗೆಸೆಯಲೀಚಕ್ರವ | ತಾ ಕಡ್ಡಿಗೆ ಬಗೆಯನು ||
ಸಾಕು ನಿನಗಸಾಧ್ಯವೆಂ | ದಾ ಕಮಲನೇತ್ರನು |
ತಾ ಕರುಣದಿಂದ ನರನ | ಸಾಕರಿಸುತೆಂದನು || ಏಸು ಧೈರ್ಯವೊ || 1 || 344 ||

**ಭಾಮಿನಿ**
ವೈರಿಭಟವಿಕ್ರಮವನಾಶಿಖಿ |
ವೈರಿಯಾತ್ಮಜಗರುಹಿ ಸೇನೆಗೆ |
ಧೈರ್ಯವನು ಪೇಳ್ವಾಗ ಯುದ್ಧವ ಕೊಡಲು ದಿತಿಸುತರ ||
ವೈರಿಯಾಲೋಚಿಸುತ ಮನದಲಿ |
ಸ್ವೈರಣೆಯಮೇಲಿಪ್ಪನಾ ರಣ |
ಭೈರವನಿಲಾತ್ಮಜನ ಕರೆದಿಂತೆಂದ ರೋಷದಲಿ || 1 || 345 ||

**ಸುರುಟಿ - ಅಷ್ಟ**
ಹನುಮ ಬಾರಯ್ಯ ಮುಖ್ಯಪ್ರಾಣ ಸತ್ರಾಣ|| ಪ ||
ಧುರಧೀರ ಕೇಳೆಮ್ಮ ಮಲೆತರಿಭಟನನು |
ವರರಥ ಸಹಿತ ನಿನ್ನಯ ಬಾಲದಿಂದೆತ್ತಿ |
ಶರಧಿಯೊಳಿಡು ಮುದದಿ | ಆಲಸ್ಯ ಬೇ |
ಡುರುಪರಾಕ್ರಮ ಬೇಗದಿ | ನೀ ತೋರಿಸಿ |
ಮುರಿ ಶೌರ್ಯವವನೆ ಕಪಿ | ವರ ತಾನಿಂತೆಂದನು || 1 || 346 ||

**ಕಾಪಿ - ಅಷ್ಟ**
ಸ್ವಾಮಿ ಪರಾಕು ಬಿನ್ನಪವ | ಭಕ್ತ |
ಕಾಮಿತವೀವ ಸಂಜೀವ ||
ಭೀಮಪರಾಕ್ರಮ ಪುಣ್ಯ | ನಾಮ ಸದಾನಂದ |
ವ್ಯೋಮಕೇಶಾದ್ಯಮರ ವಂದಿತ |
ಕಾಮಪಿತ ನೀನೇನನೆಂದೆಯ || 1 ||

ಖಳಜಂಬುಮಾಲಿ ರಾವಣನ | ಪೋಲು |
ಇಳೆಯೊಳು ದುರುಳನಲ್ಲಿವನ ||
ಕಲಹದಿ ನಿಮ್ಮಿಂದ | ಗೆಲಲರಿಯದೆ ಈಗ |
ಕಳವಿನಿಂದಲಿ ರಥವನೆತ್ತುತ |
ಶರಧಿಗಿಡಲೆನಗೀಗಲೆಂಬೆಯ || 2 ||

ಸತ್ಯದಿ ಹಳಚುವ ಭಟನ | ರಾಮ |
ಭೃತ್ಯನೀಪರಿಯಿಂದಲವನ ||
ಸತ್ಯವನಳಿಸೀಗ | ಸತ್ಯದಿ ಗೆಲಲೀಗ |
ಪೃಥ್ವಿಯೊಳಗಪಕೀರ್ತಿಯೆನ್ನರೆ |
ಉತ್ತಮರುಯೆಂದೆನಲಿಕೆಂದನು || 3 || 349 ||

**ವಾರ್ಧಕ**
ವಾಯುಸುತ ಶಂಕೆ ಬೇಡೆನ್ನಾಜ್ಞೆ ಧರ್ಮದ ಸ |
ಹಾಯವಿದು ನಿನಗೆನಗೆ ಬೇಕಾದ ಕಜ್ಜಮೆಂ |
ದಾ ಯದುಕುಲಾಧಿಪಂ ನೇಮಿಸಿದಡಾ ಕಪಿವರಂ ತನ್ನ ವಾಲಧಿಯನು ||
ಆಯತಂಗೆಯ್ದು ಸಾರಥಿ ಕುದುರೆಗಳ್ ಸಹಿತ |
ಜೇಯಮಾಗಿಹ ನೃಪನ ರಥಮಂ ತೊಡರ್ದಾಂಜ |
ನೇಯಂ ನಭಸ್ಥಳಕೆ ಚಿಗಿದಂ ಪಯೋನಿಧಿಗೆ ಬಿಸುಟನುದ್ಯೋಗದಿಂದ || 1 || 350 ||

**ಭಾಮಿನಿ**
ಹರಿ ನಿರೂಪಿಸಲರಿಯ ರಥಮಂ |
ಶರಧಿಗಿಡಲೆಂದೆನುತ ಬಾಂದಳ |
ಕರಿಸಲಾ ಭಟನಾದರಿಸಿಕೊಂಡವನಿಗಯ್ತಂದು ||
ನರನ ತೇರಾಗಸಕೆ ಚಿಗಿದ |
ಬ್ಬರಿಸಿ ಬಳಿಕಾ ಕಪಿಕುಲೇಂದ್ರಗೆ |
ಶರದ ಮಳೆಯಂ ಕರೆಯುತಿಂತೆಂದನು ವಿರೋಧದಲಿ || 1 || 351 ||

**ಭೈರವಿ - ಏಕ**
ಕೀಶಕುಲಾಧಿಪ ಕೇಳು | ನಿನ |
ಗೀಸು ಚಮತ್ಕಾರಗಳು ||
ಭ್ಯಾಸಿಸಿದವನಾರೆಂದು | ಶರ |
ರಾಶಿಯ ಕವಿಯಲ್ಕಂದು || 1 ||

ಪರಿಹರಿಸುತ ರೋಷದಲಿ | ಎಲೆ |
ನರಗುರಿ ನೀ ಸಮರದಲಿ ||
ಸರಿಸಮನೇನೆನಗೆನುತ | ಬಲು |
ಭರದಿಂದೊದೆಯೆ ತಪ್ಪಿಸುತ || 2 ||

ಶರಧಿಯ ಲಂಘಿಸಿದೆಂದು | ನೀ |
ನುರುತರ ಶೌರ್ಯದೊಳಿಂದು ||
ತರುಚರ ರಥವನು ತೆಗೆದು | ಮೇ |
ಲಿರಿಸಿದರೇನಾಗುವುದು || 3 ||

ಎಲ್ಲಿಗೆನ್ನಯ ರಥವಿಡುವೆ | ನರ |
ನಲ್ಲಿಗೆ ತಾ ಬಿಡದೊಯ್ವೆ ||
ಬಲ್ಲಿದ ರಮೆಯ ಗೃಹದಿ | ಸುರ |
ವಲ್ಲಭನಾ ಪಟ್ಟಣದಿ || 4 ||

ಬಚ್ಚಿಟ್ಟರು ವಾಸವಿಯ | ಬಿಡೆ |
ನೆಚ್ಚರಿಕೆನುತಾ ಕಪಿಯ ||
ಕಿಚ್ಚಿನಂತಸ್ತ್ರಗಳಿಡಲು | ಹರಿ |
ನುಚ್ಚುನುರಿಯ ಗೆಯ್ದಿಸಲು || 5 ||

**ಶಂಕರಾಭರಣ - ಮಟ್ಟೆ**
ಗಾಳಿಯಣುಗ ಕೇಳೊ ನಿನ್ನ |
ತೋಳ ಬಲುಹ ತಿಳಿದೆನೆಂದು |
ಘೋಳಿಸುತ್ತಲಿಡಲು ಗದೆಯ |
ಗೋಲಾಂಗೂಲನು || 1 ||

ಮರುಗಲಾಗ ಕಂಡು ಲಕ್ಷ್ಮೀ |
ವರನು ವೀರವರ್ಮನೆದೆಯ |
ಚರಣತಳದೊಳೊದೆಯಲಾಗ |
ಧರಣಿಗುರುಳುತ || 2 ||

ಆಧರಿಸುತಲೆದ್ದು ಧನು |
ನಾದವನ್ನು ಗೆಯ್ಯುತಾಗ |
ಸಾಧುಜನಗಳರಸನು ಕಡು |
ಕ್ರೋಧದಿಂದಲಿ || 3 || 359 ||

**ಕಂದ**
ಕೈಮಾಡುವೆನೆನುತಾ ನೃಪ |
ನಯ್ತರುವುದನೀಕ್ಷಿಸುತತಿ ನೂತನದಿಂದಂ ||
ಹೈಮಾಂಬರನಾ ಪಾರ್ಥನ |
ಕೈಮಾಣಿಸು ಉಸಿರುವೆ ಕೇಳೆಂದರುಪಿಸಿದಂ || 1 || 360 ||

**ಕೇದಾರಗೌಳ - ಅಷ್ಟ**
ಪಾರ್ಥ ಲಾಲಿಸಿ ಕೇಳೀ ವೀರವರ್ಮನೊಳೀಗ |
ವ್ಯರ್ಥ ಕಾದುವುದಲ್ಲದೆ ||
ಸಾರ್ಥಕವಲ್ಲ ವೈಷ್ಣವತಪೋಬಲದಿ ಸ |
ಮರ್ಥನಾಗಿಹನೀತನು || 1 ||

ಸಾಸಿರವರುಷ ನಾವೀರ್ವರು ಹಳಚಲು |
ಬೇಸರಿಸನು ರಣದಿ ||
ಘಾಸಿಪ ಬಲವೆಲ್ಲ ಬರಿದೆಯೆಂದೆನಲಾಗ |
ವಾಸವಿಯಿಂತೆಂದನು || 2 ||

ಚಿನುಮಯಾತ್ಮಕ ನೀನು ಅಣುಮಹತ್ವವ ಮಾಳ್ಪ |
ಘನ ತ್ರಾಣಿಯವ ನಿನ್ನಿಂದ ||
ಇನಿತಾದುದೆನಗಳವಡ ರಣದೊಳಗೆಂದು |
ವನಜಾಕ್ಷ ತವ ಮನಕೆ || 3 ||

ದೃಢವಾದ ಬಳಿಕಿನ್ನು ರಣದೊಳಗೆನ್ನನು |
ಪೊಡಮಡ ಭೂಪನೆಂದು ||
ನುಡಿಯೆ ಅರ್ಜುನನೆಂದ ಮಾತ ಕೇಳುತಲಾಗ |
ತಡೆಯದೆ ನೃಪ ಪೇಳ್ದನು || 4 || 364 ||

**ಭೈರವಿ - ಅಷ್ಟ**
ಅಹಹ ಮೆಚ್ಚಿದೆನು ಪಾರ್ಥ | ಸಂಗ್ರಾಮದಿ |
ಸಹಸಿಯೈ ಕಂಡೆ ಸ್ವಾರ್ಥ ||
ಬಹು ಧೀರನೆಂಬ ಪೌ | ರುಷವೀಗ ಬಿಡದೆ ನೀ |
ವಿವರಿಸಿದಂತಾಯಿತು || 1 ||

ಇದಿರಾದ ಭಟನೊಡನೆ | ಸಂಗರವನ್ನು |
ಸದರವಲ್ಲೆನಲೊಡನೆ ||
ಬೆದರದೆ ರಿಪುವನು | ಸದೆವೆನೆಂದಿರದಂತ |
ಯೆದೆಗಾರತ್ವವು ನಿನಗೆ || 2 ||

ಈಸು ನೀನೆಂದ ಮೇಗೆ | ನಿನ್ನೊಡನೀಗ |
ವಾಸಿಯಿಂದಿಲ್ಲೆಮಗೆ ||
ತೋಷವೆ ಸರಿಯೆಂದು | ಉಪಚರಿಸುತಲಾಗ |
ಕೇಶವನೊಡನೆಂದನು || 3 || 367 ||

**ಬೇಗಡೆ - ತ್ರಿವುಡೆ**
ಪಾಹಿ ಪಾಂಡವಪಾಲ | ಗೋಪಾಲ ಶೀಲ |
ಮೋಹೀನುತಜನ | ಜಾಲ ಸುಲೋಲ || ಪಾಹಿ ಪಾಂಡವ || ಪ ||
ಪತ್ತಿರೆ ನೀನಿರಲ್ ರಣದೊಳು ಪಾರ್ಥ |
ಮತ್ತೆ ಭೂಪರ ಗೆದ್ದುದಲ್ಲದೆ ಸ್ವಾರ್ಥ |
ಸತ್ಯದಿ ಕಾದಿ ನೋಡಿದೆ ತ್ರಾಣ ವ್ಯರ್ಥ |
ಚಿತ್ತಜಪಿತ ನಿನ್ನ ಮೆಚ್ಚಿನ ಭೃತ್ಯ ||
ಒತ್ತಿ ಸಮರದೊಳುಭಯರಾಯರ |
ಚಿತ್ತವಿಹ್ವಲರಾಗಿ ಕಯ್ಯಳ |
ವರ್ತಿಸುವ ಸಮಯದಲಿ ಬಿಡದೆ ಸ |
ಮಸ್ತಲೋಕಾಧೀಶನೆನಿಸಿದೆ || 1 ||

ವರ ಚತುರ್ದಶಭುವನೈಕನು ಹನುಮ |
ಧರೆಯೊಳತ್ಯಧಿಕನರ್ಜುನ ಸ್ಮರ ಭೀಮ |
ಪರಮಾತ್ಮ ನೀನು ಸದ್ಭಕ್ತಸುಪ್ರೇಮ |
ಅರಿಯದೆ ಹಳಚಿದೆ ನಿಮ್ಮೊಳು ಮಹಿಮ ||
ಸ್ಮರಿಸದಿರು ಮತ್ಪೂರ್ವಪುಣ್ಯದ |
ಸ್ಮರಣೆಯಿಂ ತವ ಚರಣಸ್ಪರ್ಶವು |
ದೊರಕಿತಿನ್ನೇನೆನ್ನ ಭಾಗ್ಯಕೆ |
ಸರಿಯಿಹುದೆಯೆಂದೊರೆದನಾಕ್ಷಣ || 2 || 369 ||

**ಭಾಮಿನಿ**
ಮರಣವೆನಗಿಲ್ಲೆನುತ ಮೊದಲೇ |
ಕರುಣಿಸಿಹನೆನಗೆ ಮನು ಪವನನ |
ತರುಣ ಪಾರ್ಥಸಮೇತ ನಿನ್ನಯ ಚರಣದರ್ಶನವು ||
ದೊರಕಿದುದರಿಂ ಮೃತ್ಯು ಗೆಲ್ದೆನೆಂ |
ದೆರಗಲಾ ಸಮಯದಲಿ ಇನಜನು |
ಭರದಿ ಕಾಣಿಸಿಕೊಂಡು ಮಣಿದಚ್ಯುತನೊಳಿಂತೆಂದ || 1 || 370 ||

**ಸೌರಾಷ್ಟ್ರ – ತ್ರಿವುಡೆ**
ಜಯ ನಮೋ ಜಯ ಕಮಲನೇತ್ರನೆ |
ಜಯ ನಮೋ ಸುರನಮಿತ ಪಾತ್ರನೆ |
ಜಯ ನಮೋ ಗೋವಿಂದ ಭವಹರ | ಜಯತು ಕೃಷ್ಣ || 1 ||

ಈತ ಲಾಲಿಸು ವೀರ ವೈಷ್ಣವ |
ನೀತನೀಪರಿಯಂತ  ಕಾಯ್ದೆನು |
ಈತನುಳಿವಳಿವಿನ್ನು ದೇವಕಿ | ಜಾತ ನಿನಗೆ || 2 ||

ಎನುತ ಕಾಲನು ವೀರವರ್ಮನ |
ವನಜನಾಭನ ಕಯ್ಯ ಕೊಡಲತಿ |
ಘನತೆಯಿಂ ಕರದೊಯ್ದನೆಲ್ಲರ | ಮನೆಗೆ ನೃಪತಿ || 3 || 373 ||

**ವಾರ್ಧಕ**
ಬಳಿಕವಂ ತನ್ನ ತನು ದೇಶಕೋಶಂಗಳಂ |
ಬಳುವಳಿಗಳಂ ಮಾಡಿ ತುರಗಂಗಳಂ ತರಿಸಿ |
ನಳಿನೋದರನ ಕಯ್ಯೊಳಿತ್ತು ಮಿಗೆ ಭಕ್ತಿಯಿಂದುಪಚರಿಸಿ ಮುರಹರನನು ||
ಉಳಿದ ನೃಪರೆಲ್ಲರಂ ಸತ್ಕರಿಸಿ ವಿನಯದಿಂ |
ಪೊಳಲೊಳಾರ್ದಿನಮಿರಿಸಿಕೊಂಡಿರ್ದು ಪಾರ್ಥನಂ |
ದಳಸಹಿತ ಪೊರಮಟ್ಟನಾ ವೀರವರ್ಮಕಂ ಕುದುರೆಗಳ ರಕ್ಷೆಗೊಡನೆ || 1 || 374 ||

**ಸಾಂಗತ್ಯ - ರೂಪಕ**
ಶೀತಾಂಶುವಂಶಸಂಜಾತ ಲಾಲಿಸಿ ಕೇಳು |
ಭೂತಳದೊಳು ವೀರವರ್ಮ ||
ಪ್ರೀತಿಯಿಂದಲಿ ನರಹರಿ ಮುಖ್ಯಾದಿಗಳ ಮಾ |
ಹಾತ್ಮರ ಮನೆಗೊಯ್ದು ಬಿಡದೆ || 1 ||

ಮನ್ನಿಸುತಾರು ದಿವಸದಲಿರಿಸಿಕೊಂಡು |
ಚಿನ್ಮಯಾತ್ಮಕನರ್ಚಿಸುತ ||
ಉನ್ನತ ರಾಜ್ಯಭೋಗಗಳನ್ನು ಸಹಿತ ಸಂ |
ಪನ್ನನಿಗೊಪ್ಪಿಸಿ ಬಳಿಕ || 2 ||

ನೆರವಿಗಾತನ ಸೇನೆಸಹಿತೊಡಗೊಂಡತಿ |
ಹರುಷದಿ ನರನಾರಾಯಣರು ||
ಹರಿಭಕ್ತನಾಗಿಹ ಚಂದ್ರಹಾಸನ ಮೇಲೆ |
ತುರಗವ ಬಿಟ್ಟರ್ ಭಕ್ತಿಯೊಳು || 3 ||

ಜಯಸತಿಯೊಡಗೊಂಡು ಬಕದಾಲ್ಭ್ಯನನು ಗೆಲ್ದು |
ಜಯಿಸುತ್ತ ಸಿಂಧುದೇಶವನು ||
ಹಯಮೇಧತುರಗ ಮಾರ್ಬಲ ಸಹಿತರ್ಜುನ |
ಭಯರಹಿತನ ನೇಮದಿಂದ || 4 ||

ಗಜಪುರಕಯ್ತಂದಡೆಮಸುತನಿದಿರ್ಗೊಂಡು |
ನಿಜಭಕ್ತಿಯಿಂದ ಮಾಪತಿಯ ||
ನಿಜಮೂರ್ತಿಗೆರಗಿ ಪಾರ್ಥನ ತಳ್ಕಿಸುತ ಸೇನಾ |
ವ್ರಜರ ಕೊಂಡಾಡುತ್ತಲಾಗ || 5 || 379 ||

**ಭಾಮಿನಿ**
ವರಶಿಖಿಧ್ವಜ ಮುಖ್ಯರನು ಬಲು |
ತರದಿ ಮನ್ನಿಸಿ ಧರ್ಮರಾಯನು |
ಕರುಣದಿಂ ಹರಿಯಾಜ್ಞೆಯಿಂದಲಿ ಜನರ ಸನ್ಮತದಿ ||
ತುರಗಕ್ರತು ಸಂಪೂರ್ಣ ಗೆಯ್ದತಿ |
ಹರುಷದಿಂದಿರಲಾಗ ಸಂತತ |
ತರುಣಿಯರು ಆರತಿಯ ತೋರಿದರಧಿಕ ಸಂಭ್ರಮದಿ || 1 || 380 ||

**ಢವಳಾರ – ಆದಿ**
ಶ್ರೀಮಾವಲ್ಲಭನಾದವಗೆ | ಶ್ಯಾಮಲವರ್ಣಗೆ ಕೇಶವಗೆ |
ಕಾಮನ ಪಿತ ಗೋಪಾಲ ಸುಶೀಲಗೆ |
ಕಾಮುಕರೆಲ್ಲರ ಗೆಲಿದ ಮಹಾತ್ಮಗೆ |
ಕಾಮಿನಿಯರು ಬಲು ಸ್ವರವೆತ್ತಿ ಪಾಡುತ |
ತಾಮರಸಾರತಿಯ ಬೆಳಗಿರೆ || 1 ||

ವಾಸವಾದ್ಯಮರವಂದಿತಗೆ | ವಾಸುಕಿಶಯನ ಶ್ರೀಹರಿಗೆ |
ಭಾಸುರಾಂಗ ಪೀತಾಂಬರಧಾರಿಗೆ |
ದೂಷಣಾದ್ಯರ ದರ್ಪವ ಮುರಿದವನಿಗೆ |
ಸಾಸಿರನಾಮೋಚ್ಚಾರಿಸಿ ಪಾಡುತ |
ಸೂಸಕದಾರತಿಯ ಬೆಳಗಿರೆ || 2 ||

ಮೇದಿನಿಪತಿ ಧರ್ಮಜಗೆ | ಆ ದುಶ್ಶಾಸವಿದಾರನಿಗೆ |
ಕ್ರೋಧದಿ ಮೃಡನೊಳು ಸೆಣಸುತಲಸ್ತ್ರವ |
ಸಾಧಿಸಿದಗೆ ನಕುಲಗೆ ಸಹದೇವಗೆ |
ಯಾದವರಾಯಶಿರೋಮಣಿಗೆನುತತಿ |
ಮೋದದೊಳಾರತಿಯ ಬೆಳಗಿರೆ || ಶೋಭಾನೆ || 3 || 383 ||

**ವಾರ್ಧಕ**
ಮಿಗೆ ಮೂಜಗಂ ದಣಿಯೆ ಹಯಮೇಧ ಯಜ್ಞಮಂ |
ಮುಗಿಸಿ ಧರ್ಮಾತ್ಮಜಂ ಕೃಷ್ಣಾದಿ ಸಕಲ ನೃಪ |
ತಿಗಳನವರವರ ನಗರಂಗಳ್ಗೆ ಕಳುಹಿ ಸುಖದಿಂದ ರಾಜ್ಯಂಗೆಯ್ದನು ||
ಅಗಣಿತ ಮಹಾಭಾರತವನು ಜೈಮುನಿಮುನಿಪ |
ಮಿಗೆ ಹರುಷದಿಂದ ವರ್ಣಿಸಿದನೆಂದೆನುತಾಗ |
ಜಗತಿಪತಿ ಜನಮೇಜಯಂಗೆ ವೈಶಂಪಾಯಮುನಿಪನೊರೆದಾ ಕಥೆಯನು || 1 || 384 ||

**ಭಾಮಿನಿ**
ತರಳತನದಿಂ ಯಕ್ಷಗಾನದೊ |
ಳೊರೆದೆನೀಕವಿತೆಯಲಿ ತಪ್ಪಿರೆ |
ಪರಮ ವಿದ್ಯಾಧರರು ತಿದ್ದುತ ಮೆರೆಸಿ ಕೃಪೆಯಿಂದ ||
ಧರೆಯೊಳುತ್ತಮ ಕೃತ್ತಿಕಾಪುರ |
ದರಸ ಶ್ರೀಸೋಮೇಶನಂಘ್ರಿಯ |
ಸರಸಿರುಹ ದಯದಿಂದ ರಚಿಸಿದೆನೀ ಕಥಾಮೃತವ || 1 || 385 ||

**ಸೌರಾಷ್ಟ್ರ - ಆದಿ**
ಮಂಗಲಂ ಜಯ ಮಂಗಲಂ || ಪ ||
ಸುರಮುನಿನಮಿತ ಸರ್ವೇಶನಿಗೆ |
ವರಕಮಲಾಕ್ಷ ಪೀತಾಂಬರಗೆ ||
ಕರಿವರೋದ್ಧಾರಗೆ ಗರುಡಾರೂಢಗೆ |
ಶರಣಜನರ ಸೌಭಾಗ್ಯನಿಗೆ || ಮಂಗಲಂ || 1 ||

ಪಾಂಡವಪಾಲ ಗೋಪಾಲನಿಗೆ |
ಪುಂಡರೀಕೋದರಭೂಷನಿಗೆ ||
ಮಂಡಲಧೀಶಗೆ ಮಹಿಮಾನಂತಗೆ |
ದಂಡಧರನ ಪಿತಭಾಸನಿಗೆ || ಮಂಗಲಂ || 2 ||

ಆದಿಪುರಾಣವಿಚಾರನಿಗೆ |
ಸಾಧುಜನರ ಸಂರಕ್ಷನಿಗೆ ||
ಮೇದಿನಿಗಧಿಕ ಶಿಕಾಖ್ಯಪುರೀಶಗೆ |
ಆದಿ ಕುತ್ಯಾರ ಸೋಮೇಶನಿಗೆ || ಮಂಗಲಂ || 3 || 388 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ - ೧೯೫೨

**ಪ್ರಸಂಗ ಪ್ರತಿ ಆಧಾರ:** ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ - ೧೯೫೨ರಲ್ಲಿ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಅನಂತ ದಂತಳಿಕೆ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ರಂಜನಾ ಭಟ್, ವಸುಮತಿ ಜಿ.

**ಅಂತರಜಾಲ ಪ್ರತಿ ವಿನ್ಯಾಸ:** ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ